# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಮುಖ ಪತ್ರಿಕೆ

ಸಂಪುಟ 8 ಸಂಚಿಕೆ 36 ಸೆಪ್ಟಂಬರ್ 7, 1986 ಬೆಲೆ 80 ಪೈಸೆ.


ಒಳಗೇನಿದೆ?....



# ಕೃಷ್ಣಾ ಯೋಜನೆಗೆ ಸಂಪನ್ಮೂಲ–ವಿಧಾನ ಸಭೆಯಲ್ಲಿ ಶಾಸಕರ ಮೊಸಳೆ ಕಣ್ಣೀರು

–ಎನ್. ಕೆ. ಉಪಾಧ್ಯಾಯ

ಬಿಜಾಪುರ, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳ ಬರಗಾಲ ನಿವಾರಣೆಗೆ ಕೃಷ್ಣಾನದಿ ನೀರಿನ ಅಗತ್ಯವನ್ನು ಎಲ್ಲರೂ ಮನಗಂಡಿದ್ದಾರೆ. ಬಚಾವತ್ ತೀರ್ಪಿನಂತೆ ಕರ್ನಾಟಕಕ್ಕೆ ಸಲ್ಲಬೇಕಾದ 750 ಟಿ.ಎಂ.ಸಿ. ನೀರನ್ನು ಕ್ರಿ.ಶ. 2000 ಇಸವಿಯೊಳಗೆ ಅಂದರೆ ಇನ್ನು 15 ವರ್ಷ 4 ತಿಂಗಳೊಳಗೆ ಪೂರ್ಣ ಬಳಸಿಕೊಳ್ಳುವಂತಾಗಲು ವರ್ಷಕ್ಕೆ ರೂ. 250 ಕೋಟಿ ವಿನಿಯೋಗ ಅಗತ್ಯವೆಂದು ಲೋಕೋಪಯೋಗಿ ಮಂತ್ರಿ ದೇವೇಗೌಡರು ವಿಧಾನ ಸಭೆಯಲ್ಲಿ ಹೇಳಿದರು. ಈ ಯೋಜನೆಯ ಕುರಿತು ಆಳುವ ಮತ್ತು ವಿರೋಧ ಪಕ್ಷದ ಸದಸ್ಯರೆಲ್ಲರೂ ಕಾಳಜಿ ವ್ಯಕ್ತಪಡಿಸಿದರು. ಯೋಜನೆ ಪೂರೈಸಲಿಕ್ಕೆ ಹಣದ ಅಭಾವವನ್ನು ದೇವೇಗೌಡರು ಪ್ರಸ್ತಾಪಿಸಿದರು. ಕೆಲವು ಉತ್ಪಾದಕವಲ್ಲದ ಯೋಜನೆಗಳಿಗೆ ಮೀಸಲಿಟ್ಟಿರುವ ಹಣವನ್ನು ಈ ಯೋಜನೆಗೆ ಒದಗಿಸುವಂತಾಗಬೇಕೆಂದೂ ಅಭಿಪ್ರಾಯ ವ್ಯಕ್ತಮಾಡಿದರು. ಈ ಯೋಜನೆಗಳಿಗಾಗಿ ವಿಧಾನ ಸಭೆ ಪ್ರತಿ ವರ್ಷ ರೂ 300ಕೋಟಿ ಮಂಜೂರು ಮಾಡಲಿ ಎಂದು ತನ್ನ ಆಶಯವನ್ನು ವ್ಯಕ್ತಮಾಡಿದಾಗ, ಆಳುವ ಜನತಾ ಪಕ್ಷದ ಮಂತ್ರಿ ದೇವೇಗೌಡರ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳಲಿಚ್ಛಿಸಿದ ವಿರೋಧ ಪಕ್ಷದ ಕಾಂಗ್ರೆಸ್ ಮುಖಂಡರು "ಅಂಥ ನಿರ್ಣಯ ಮಂಡಿಸಿ, ನಾವು ಒಪ್ಪಿಗೆ ನೀಡುತ್ತೇವೆ" ಎಂದು ಹೇಳಿ ಜನತಾ ಸರ್ಕಾರವನ್ನು ಪಜೀತಿಗೊಳಿಸಿದರು.

ಈಗ ಕಾಂಗ್ರೆಸ್ ಹಾಗೂ ಜನತಾದಲ್ಲಿರುವ ಹಲವಾರು ಮಂತ್ರಿಗಳೂ, ಶಾಸಕರೂ ರಾಜ್ಯದ ನೀರಾವರಿ ಯೋಜನೆಗಳ, ಕೃಷ್ಣಾ ನೀರಿನ ತೀವ್ರ


(8ನೇ ಪುಟಕ್ಕೆ)


## ವೆಂಕಟಸ್ವಾಮಿ ವರದಿ ವಿರುದ್ಧ ಚಳುವಳಿ

ವೆಂಕಟಸ್ವಾಮಿ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಮೊನ್ನೆ ವಿಧಾನ ಸಭೆಯಲ್ಲಿ ಮಂಡಿಸಲಾಯಿತು. ಆ ವರದಿಯಲ್ಲಿ ಹಿಂದೆ ಹಾವನೂರು ವರದಿಯಲ್ಲಿ ಸೇರಿಸಲ್ಪಟ್ಟ ಕೆಲವು ಶಿಫಾರಸುಗಳನ್ನು ಕೈಬಿಡಲಾಗಿದೆ. ವೆಂಕಟಸ್ವಾಮಿ ಆಯೋಗದ ವರದಿಯ ಕುರಿತು ಸರಕಾರ ಕೊನೆ ನಿರ್ಣಯ ಕೈಗೊಂಡಿಲ್ಲ. ಅದು ಚರ್ಚೆಗೆ ಬರಲಿದೆ. ಅನಂತರ ಕೊನೆ ನಿರ್ಣಯ ಹೊರಬೀಳುವುದು.

ಪ್ರತಿಯೊಂದು ಆಯೋಗಕ್ಕೂ ತನ್ನ ವರದಿ ಸಲ್ಲಿಸುವ ಅಧಿಕಾರವಿದೆ. ಅದರಿಂದ ಕೆಲವರಿಗೆ ಅನ್ಯಾಯವಾಗಬಹುದು. ಕೆಲವರಿಗೆ ಲಾಭ ಆಗಬಹುದು. ವರದಿಯ ಶಿಫಾರಸುಗಳ ಕುರಿತು ಸಂಪೂರ್ಣ ಚರ್ಚೆ ನಡೆಸಿ ಒಂದು ನಿರ್ಣಯಕ್ಕೆ ಬರಬೇಕಾಗಿದೆ. ವೆಂಕಟಸ್ವಾಮಿ ಆಯೋಗದ ವರದಿ ಪ್ರಕಟವಾದ ಕೂಡಲೇ ಅದರ ಕುರಿತು ತಂತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಮಾಡಲು ಯಾರಿಗಾದರೂ ಸ್ವಾತಂತ್ರ್ಯವಿದೆ. ಆದರೆ ಆ ವರದಿಯೇ ಕೊನೆ ನಿರ್ಣಯವೆಂದು ತಿಳಿದು ಚಳುವಳಿ ಹೂಡುವುದು, ಹಿಂಸಾಕೃತ್ಯದಲ್ಲಿ ತೊಡಗುವುದು ಸರಿಯಲ್ಲ.

ಕೇಂದ್ರ-ರಾಜ್ಯ ಸರಕಾರಗಳ ನೀತಿಯಿಂದಾಗಿ ಜನರಲ್ಲಿ ಉಂಟಾಗುವ ಅಸಮಾಧಾನವನ್ನು ಸಾಮ್ರಾಜ್ಯಶಾಹಿಗಳು, ವಿದೇಶಿ ಶಕ್ತಿಗಳು ದುರುಪಯೋಗಿಸಿಕೊಂಡು ದೇಶದ ಸಮಗ್ರತೆಗೆ ಭಾವೈಕ್ಯಕ್ಕೆ ಧಕ್ಕೆ ಉಂಟುಮಾಡುತ್ತಿರುವಾಗ ಈ ರೀತಿಯ ಚಳುವಳಿ ಮತ್ತಷ್ಟು ಅಪಾಯಕಾರಿಯಾಗಿದೆ. ಆದ್ದರಿಂದ ವಿದ್ಯಾರ್ಥಿಗಳೂ, ಸಂಬಂಧಪಟ್ಟ ಕೋಮಿನ ಮುಖಂಡರೂ ವಿಧಾಯಕ ಸೂಚನೆಗಳನ್ನು ಸರಕಾರಕ್ಕೆ ಸಲ್ಲಿಸಿ ಸರಿಯಾದ ತೀರ್ಮಾನಕ್ಕೆ ಬರುವಂತೆ ಸಹಾಯ ಮಾಡುವುದು ಅಗತ್ಯ. ಆದ್ದರಿಂದ ಜಾತಿ-ಜಾತಿಗಳಲ್ಲಿ ದ್ವೇಷ ಉಂಟಾಗಬಹುದಾದ ಚಳುವಳಿ ಕೂಡಲೇ ಕೊನೆಗೊಳ್ಳಲಿ.

# ಹರಾರೆ ಶೃಂಗ ಸಭೆಯ ಕರೆ

## ವರ್ಣ ಭೇದವೆಂಬ ಶಾಪದ ಮೂಲೋಚ್ಛಾಟನೆಯಾಗಲಿ

ದಕ್ಷಿಣ ಆಫ್ರಿಕದ ಬೋಥಾ ಸರಕಾರ ಕರಿಯರ ಮೇಲೆ ನಡೆಸುತ್ತಿರುವ ವರ್ಣಭೇದ ನೀತಿಯನ್ನು ಅಂತ್ಯಗೊಳಿಸಲು ಉಗ್ರ ಕ್ರಮ ಕೈಗೊಳ್ಳಬೇಕೆಂದು ಆಫ್ರಿಕದ ಮುಂಚೂಣಿಯ ದೇಶಗಳ ಮೇಲೆ ನಡೆಯುತ್ತಿರುವ ಆಕ್ರಮಣವನ್ನು ತಡೆಗಟ್ಟಲು ಉಚಿತ ನೆರವು ನೀಡಬೇಕೆಂದು ಆಗ್ರಹಪಡಿಸುವ ಐಕ್ಯೈಕ ಏಕಕಂಠದ ಕ್ರಿಯಾತ್ಮಕ ಧ್ವನಿ ಎಂಟನೇ ಅಲಿಪ್ತ ರಾಷ್ಟ್ರಗಳ ಶೃಂಗ ಸಭೆಯಲ್ಲಿ ಕೇಳಿ ಬಂತು.

ಜಿಂಬಾಬ್ವೆ ರಾಷ್ಟ್ರದ ಹರಾರೆಯಲ್ಲಿ ಅತ್ಯಂತ ಉತ್ಸಾಹದಿಂದ ಮಿಳಿತವಾದ ವಾತಾವರಣದಲ್ಲಿ ಭಾರತದ ಪ್ರಧಾನಿ ರಾಜೀವ್ ಗಾಂಧಿಯವರಿಂದ ಅಲಿಪ್ತ ಚಳುವಳಿಯ ಮುಖಂಡತ್ವವನ್ನು ಸ್ವೀಕರಿಸಿದ ಜಿಂಬಾಬ್ವೆ ಪ್ರಧಾನಿ ರಾಬರ್ಟ್ ಮುಗಾಬೆಯವರು "ಈಗ ಬೇಕಾಗಿರುವುದು ಕ್ರಿಯೆ, ವರ್ಣ ಭೇದವೆಂಬ ಅಭಿಶಾಪವನ್ನು ಮೂಲೋಚ್ಛಾಟನೆ ಮಾಡುವಂಥ ಕ್ರಿಯೆ. ನೆರೆಯ ಸ್ವಾತಂತ್ರ ರಾಷ್ಟ್ರಗಳ ಮೇಲೆ ಅತಿಕ್ರಮಣ ಮಾಡುವ ದಕ್ಷಿಣ ಆಫ್ರಿಕ ಸರ್ಕಾರವನ್ನು ನಿಯಂತ್ರಿಸುವ ಕ್ರಿಯೆ. ನಮಿಬಿಯಾದಲ್ಲಿ ಪ್ರಿಟೋರಿಯಾ ಸರಕಾರ ನಡೆಸಿರುವ ದುರಾಕ್ರಮಣ ಅಂತ್ಯಗೊಳಿಸುವ ಕ್ರಿಯೆ ಇಂದು, ಈಗ ಬೇಕಾಗಿದೆ" ಎಂದು ಹರ್ಷೋದ್ಗಾರಗಳ ಮಧ್ಯೆ ಘೋಷಿಸಿದರು.

ಅಣ್ವಸ್ತ್ರ ಪರೀಕ್ಷೆ ನಿಷೇಧದ ಕುರಿತು ರಶ್ಯ ತನ್ನಿಂದ ತಾನೇ ವಿಧಿಸಿಕೊಂಡ ಸಂಯಮ ಹಾಗು ಅಣ್ವಸ್ತ್ರ ಸ್ಥಗಿತಗೊಳಿಸಲು ಅಂತರ್ರಾಷ್ಟ್ರೀಯ ಒಪ್ಪಂದಗಳ ಸೂಚನೆ ಬಗ್ಗೆ ಅಲಿಪ್ತ ರಾಷ್ಟ್ರಗಳ ಸ್ಪಷ್ಟನಿಲವನ್ನು ವಿವರಿಸಿ, ಅಮೇರಿಕ ಅಣ್ವಸ್ತ್ರ ಪರೀಕ್ಷೆ ನಿಷೇಧದ ಕುರಿತ ರಶ್ಯದ ಜೊತೆ ಒಪ್ಪಂದಕ್ಕೆ ಬರಲೇಬೇಕೆಂದು ಆಗ್ರಹ ಪಡಿಸಿ ಯುದ್ಧದಿಂದಾಗಬಹುದಾದ ಹಾನಿಯನ್ನು ಶಾಂತಿಗಾಗಿತಮಗಿರುವ ಕಾಳಜಿಯನ್ನು ಪ್ರದರ್ಶಿಸಿದರು.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಬಲಿಯಾಗಿರುವ ಪಾಕಿಸ್ತಾನ, ಕಮ್ಯೂನಿಸ್ಟ್ ವಿರೋಧಿಯಾದ ಇರಾನ್ ಸರ್ಕಾರದ ಪ್ರತಿನಿಧಿಗಳು ಅಪಸ್ವರ ಎತ್ತಿದರೂ ಕೂಡ ಮಣಿಯದ ಅಲಿಪ್ತ ರಾಷ್ಟ್ರಗಳ ಎಂಟನೆಯ ಸಭೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಮತ್ತೊಂದು ಮೈಲಿಗಲ್ಲೆಂದು ಹೇಳಬಹುದಾಗಿದೆ.

ಜಗತ್ತು ಅಣ್ವಸ್ತ್ರ ಯುದ್ಧದ ಭೀತಿಯನ್ನೆದುರಿಸುತ್ತಿರುವಾಗ, ಮೂರನೇ ಜಗತ್ತಿನ ರಾಷ್ಟ್ರಗಳು ಹೊರಲಾರದಂಥ ಸಾಲದಲ್ಲಿ ಮುಳುಗಿರುವಾಗ, ಆಳಾಗುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟಿನಿಂದಾಗಿ ದೇಶದೊಳಗೆ ರಾಷ್ಟ್ರದ ಅಪಾಯಕಾರಿ ಸ್ಫೋಟ ನಡೆಯುತ್ತಿರುವಾಗ, ಸಾಮ್ರಾಜ್ಯಶಾಹಿ ಅಮೇರಿಕದಿಂದ ಸ್ವತಂತ್ರ ರಾಷ್ಟ್ರಗಳ ಸಾರ್ವಭೌಮತ್ವಕ್ಕೆ ಅಪಾಯ ಉಂಟಾಗುತ್ತಿರುವಾಗ ಅಲಿಪ್ತ ರಾಷ್ಟ್ರಗಳ ಎಂಟನೆಯ ಸಮಾವೇಶ ಸೇರುತ್ತಿದೆ. ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯ ವಿರುದ್ಧ ನಿರಂತರ ಹೋರಾಟಕ್ಕಿಳಿದಿರುವ ಮುಂಚೂಣಿ ರಾಷ್ಟ್ರಗಳಲ್ಲೊಂದಾದ ಜಿಂಬಾಬ್ವೆಯಲ್ಲಿ ಈ ಸಭೆ ಸೇರುತ್ತಿರುವುದರಿಂದ ಫ್ಯಾಸಿಸ್ಟ್ ಬೋಥಾ ಸರ್ಕಾರದ ವರ್ಣಭೇದ ನೀತಿಯ ವಿರುದ್ಧ ಚಳುವಳಿ ತೀವ್ರಗೊಳಿಸಲು ಅದಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲು ಸಾಧ್ಯವಾಗಬಹುದಾಗಿದೆ.

ಅಲಿಪ್ತ ರಾಷ್ಟ್ರಗಳ ಸಂಘಟನೆಯನ್ನು ಮುರಿಯಲು ಅಮೇರಿಕನ್ ಸಾಮ್ರಾಜ್ಯಶಾಹಿ ಸತತ ಪ್ರಯತ್ನ ನಡೆಸುತ್ತಲೇ ಬಂದಿದೆ. ಆ ರಾಷ್ಟ್ರಗಳಿಗೆ ನಾನಾತರದ ಆಮಿಷ ತೋರಿಸಿ, ಬೆದರಿಕೆ ಹಾಕಿ ಒತ್ತಡಗಳ ಮೂಲಕ ಅಲಿಪ್ತ ಚಳುವಳಿ ತನ್ನ ವಿರೋಧವಾಗಿ ಬೆಳೆಯ ಬಾರದೆ, ತನ್ನ ನೀತಿಗನುಸಾರವಾಗಿ ಧೋರಣೆ ರೂಪಿಸುವಂತೆ ಒಂದೇ ಸಮನೆ ಪ್ರಯತ್ನಿಸುತ್ತಿದೆ. ಈ ಸಮಾವೇಶ ನಡೆಯುತ್ತಿರುವಾಗಲೇ ಜಿಂಬಾಬ್ವೆಗೆ ಆರ್ಥಿಕ ನೆರವು ಕಡಿತಮಾಡಿ ಅಪ್ರತ್ಯಕ್ಷ ಎಚ್ಚರಿಕೆ ನೀಡಿದೆ. ಅಮೇರಿಕ ಅದಕ್ಕೆ ಹೆದರದೆ ಅಲಿಪ್ತ ರಾಷ್ಟ್ರಗಳು ಸಮ್ಮೇಳನ ದೃಢವಾದ ನಿರ್ಣಯಗಳನ್ನು ಕೈಗೊಂಡಿದೆ. ಅದು ಅತ್ಯಂತ ಸ್ವಾಗತಾರ್ಹ. ○

## ಪರಿಸರ ರಕ್ಷಣೆಯ ಹೆಸರಿನಲ್ಲಿ ಉದ್ಯಮಗಳ ನಾಶ

ಜುಲೈ 9 ರಂದು ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಉದ್ಯಮಗಳ ವಿಕಾಸವನ್ನು ಚರ್ಚಿಸಲು ಕರೆದ ಒಂದು ಸಭೆ ದೆಹರಾಡೂನ್‌ನಲ್ಲಿ ಉದ್ದಿಮೆಗಳ ವಿಕಾಸವನ್ನು ಪಡೆಯಲು ನಿರ್ಧರಿಸಿದೆಯೆಂದು ವರದಿಯಾಗಿದೆ. ಈ ಸರಕಾರೀ ನಿರ್ಣಯ ಒಂದೂಕಾಲು ಲಕ್ಷ ಜನರ ಮೇಲೆ ದುಷ್ಪರಿಣಾಮ ಬೀರಿದೆ.

ಈ ಸರಕಾರೀ ನಿರ್ಣಯದ ಪ್ರಕಾರ ಡೆಹರಾಡೂನಿನಲ್ಲಿರುವ 17 ಕೋಟಿ ರೂ ತೊಡಗಿಸಿರುವ 400 ಜನ ಕಾರ್ಮಿಕರು ದುಡಿಯುವ ಸರಕಾರೀ ಸಂಸ್ಥೆ ಯು. ಪಿ. ಕಾರ್ಬೈಡನ್ನು, 200 ಕಾರ್ಮಿಕರಿರುವ ಆದಿತ್ಯ ಕೆಮಿಕಲ್ಸ್, 333 ಕಾರ್ಮಿಕರು ದುಡಿಯುತ್ತಿರುವ ಎ ಆರ್. ಐ. ಸಿಮೆಂಟ್ಸ್ ಮುಂತಾದ ಉದ್ದಿಮೆಗಳನ್ನು ಮುಚ್ಚಲು ಜಿಲ್ಲಾ ಆಡಳಿತ ಜುಲೈ 31 ರಿಂದ ಆದೇಶ ನೀಡಿದೆ. ಇದಲ್ಲದೆ 175 ಸಣ್ಣದ ಹಾಗೂ 70ಅಮೃತ ಶಿಲೆಯ ಸಣ್ಣ ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಇವುಗಳಲ್ಲಿ ಸುಮಾರು 2000 ಕಾರ್ಮಿಕರು ದುಡಿಯುತ್ತಿದ್ದರು.

ಈ ಹಿಂದುಳಿದ ಬೆಟ್ಟ ಪ್ರದೇಶದಲ್ಲಿ ಉದ್ಯೋಗ ಅರಿಸಿಕೊಂಡು ಬರುವ ಜನರಿಗೆ ಇದುವರೆಗೆ ಡೆಹರಾಡೂನ್ ಏಕಮಾತ್ರ ಕೇಂದ್ರವಾಗಿತ್ತು. ಈಗ ಸರಕಾರ ಅದನ್ನು ಕೂಡಾ ಹಾಳುಗೆಡವಲು ಯತ್ನಿಸುತ್ತಿದೆ.

ಇದರಿಂದ ಜನರಲ್ಲಿ, ಮುಖ್ಯತಃ ಕಾರ್ಮಿಕರಲ್ಲಿ ರೋಷ ಹರಡಲಾರಂಭಿಸಿ ಕಾರ್ಮಿಕರು ಹಲವಾರು ಮತ ಪ್ರದರ್ಶನಗಳ ಮೂಲಕ ತಮ್ಮ ಸಿಟ್ಟನ್ನು ಪ್ರದರ್ಶಿಸಿದರು. ಸಿ. ಐ. ಟಿ. ಯು. ಈ ಪ್ರದರ್ಶನಗಳಿಗೆ ನೇತೃತ್ವ ನೀಡಿತು.

ಜನತೆಯ ಅಸಂತೃಪ್ತಿಯನ್ನು ಕಂಡ ಸರಕಾರ ಕೈಗಾರಿಕಾ ಯಂತ್ರಾಲಯದ ಜಂಟಿ ಕಾರ್ಯದರ್ಶಿಗಳನ್ನು ಆಗಸ್ಟ್ 7 ರಂದು ಡೆಹರಾಡೂನ್‌ಗೆ ಕಳಿಸಿತು. ಆದರೆ ಅತ್ತ ಸರಕಾರ ಡೂನ್ ಕಣಿವೆ ಮಂಡಳಿಯನ್ನು ಈ ಉದ್ದಿಮೆಗಳ ಭವಿಷ್ಯದ ಬಗ್ಗೆ ನಿರ್ಧರಿಸಲು ರಚಿಸಿತು. ಈ ಮಂಡಳಿಯಲ್ಲಿ ಜನತೆಯ ಪ್ರತಿನಿಧಿಗಳು ಯಾರೂ ಇರಲಿಲ್ಲ ಎಂಬುದು ಗಮನಾರ್ಹ. ಮತ್ತೆ ಜನರ ಪ್ರತಿಭಟನೆಯ ನಂತರ ಕೇಂದ್ರೀಯ ವಾಣಿಜ್ಯ ರಾಜ್ಯ ಮಂತ್ರಿ ಬ್ರಹ್ಮದತ್ತರನ್ನು ಈ ಮಂಡಳಿಗೆ ಸೇರಿಸಲಾಯ್ತು.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಮಸೂರಿ–ಡೆಹರಾಡೂನ್ ಪ್ರಾಧಿಕರಣದ ಜನ ಪ್ರತಿನಿಧಿಗಳು ಡೆಹರಾಡೂನ್‌ನಲ್ಲಿ 5-7 ಶೇಕಡಾ ಉದ್ಯಮ ಕ್ಷೇತ್ರವಿರಬೇಕೆಂದು ನಿರ್ಧರಿಸಿದರೆ ಈ ಕಣಿವೆ ಮಂಡಳಿ ಕೇವಲ 1.98 ಶೇಕಡಾ ಮಾತ್ರವಿರಬೇಕೆಂದು ಹೇಳುತ್ತದೆ.

ಈ ಹಿನ್ನೆಲೆಯಲ್ಲಿ ಸಿ. ಐ ಟಿ. ಯು. ಜಿಲ್ಲಾ ಸಮಿತಿ ಡೆಹರಾಡೂನ್‌ನ ಜನರ ಭಾವನೆಗಳನ್ನು ಉಳಿಸಿ ಡೂನ್ ಕಣಿವೆ ಮಂಡಳಿಯನ್ನು ರದ್ದು ಮಾಡಿ ಡೆಹರಾಡೂನ್‌ನ ವಿನಾಶವನ್ನು ತಡೆಯಬೇಕೆಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದೆ.

## ಸೂರತ್ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರಿಗೆ ಜಯ

ಗುಜರಾತ್ ರಾಜ್ಯದ ಸೂರತ್ ಜಿಲ್ಲೆಯ ಮಾಂಗ್ರೋಲ್ ತಾಲ್ಲೂಕಿನಲ್ಲಿ ಕೃಷಿ ಕಾರ್ಮಿಕರ ಹೋರಾಟದಲ್ಲಿ ಒಂದು ಹೊಸ ಹುರುಪು ಮೂಡಿದೆ. ಕೆಂಬಾವುಟದಡಿ ಅವರು ಸಂಘಟಿತರಾಗುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಭಾರೀ ಬಹಿರಂಗ ಸಭೆಗಳು ನಡೆದವು. ಇದನ್ನು ಕಂಡು ಸಹಿಸಲಾರದ ಜಮೀನ್‌ದಾರರು ಗದ್ದೆಗಳನ್ನು ನೋಡಿಕೊಳ್ಳಲೆಂದು ಇಟ್ಟುಕೊಂಡ ಗೂಂಡಾಗಳ ಮೂಲಕ ಭಯೋತ್ಪಾದನೆ ಆರಂಭಿಸಿದರು. ಇದನ್ನು ವಿರೋಧಿಸಿ ಜುಲೈ 15ರಂದು ಮಾಂಗ್ರೋಲ್‌ನಲ್ಲಿ ಕೃಷಿ ಕಾರ್ಮಿಕರ ಸಂಘ ಹಾಗೂ ಕಿಸಾನ್ ಸಭಾ ಸಂಘಟಿಸಿದ ಸಾರ್ವಜನಿಕ ಸಭೆಯಲ್ಲಿ ಸುಮಾರು 3 ಸಾವಿರ ಕೃಷಿ ಕಾರ್ಮಿಕರು, ರೈತರು ಭಾಗವಹಿಸಿದರು. ಜಮೀನ್‌ದಾರರ ಭಯೋತ್ಪಾದನೆ ಮತ್ತಷ್ಟು ಹೆಚ್ಚಿತು. ಆದರೆ ಕೃಷಿ ಕಾರ್ಮಿಕರು ಹಿಂಜರಿಯಲಿಲ್ಲ. ಜುಲೈ 24ರಂದು ಮಳೆಯಿದ್ದರೂ ಇನ್ನೊಂದು ಭಾರೀ ಬಹಿರಂಗ ಸಭೆ ನಡೆಯಿತು. ಗುಜರಾತ್ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ರಮಣಭಾಯಿ ಚೌಧರಿ ಮಾತನಾಡುತ್ತಾ ಜಮೀನ್‌ದಾರರು ತಮ್ಮ ಗೂಂಡಾಗಳನ್ನು ವಾಪಾಸು ಕರೆದುಕೊಳ್ಳುವವರೆಗೆ ಆಂದೋಲನ ಮುಂದುವರಿಯುವುದಾಗಿ ಘೋಷಿಸಿದರು.

ಈ ಸಭೆಯಿಂದ ಉತ್ಸಾಹಿತರಾದ ಕೃಷಿಕಾರ್ಮಿಕರು 12 ಸುತ್ತಮುತ್ತಲ ಹಳ್ಳಿಗಳಲ್ಲಿ. ಮರು ದಿನದಿಂದಲೇ ಮುಷ್ಕರ ಆರಂಭಿಸಿದರು. ಗೂಂಡಾಗಳ ಆಕ್ರಮಣ ಇನ್ನಷ್ಟು ಹೆಚ್ಚಿತು. ಇನ್ನು ಸುಮ್ಮನಿರುವುದು ಆದಿವಾಸಿ ಕೃಷಿ ಕಾರ್ಮಿಕರಿಗೆ ಸಾಧ್ಯವಾಗಲಿಲ್ಲ. 3000 ಮಂದಿ ತಮ್ಮ ಪರಂಪರಾಗತ ಆಯುಧಗಳಿಂದ ಸಜ್ಜಿತರಾಗಿ ಮಾಂಗ್ರೋಲ್‌ನತ್ತ ಹೊರಟರು. ಎ[illegible] ಎಸ್.ಪಿ. ಯ ಆಶ್ವಾಸನೆ ಹಾಗೂ ರಮಣಭಾಯಿಯವರ. ಮಧ್ಯ ಪ್ರವೇಶದ ನಂತರವೇ ಕೃಷಿಕಾರ್ಮಿಕರು ಹಿಂದಿರುಗಿದ್ದು ಇದು ಜಮೀನ್‌ದಾರರನ್ನು ನಡುಗಿಸಿಬಿಟ್ಟಿತು.

ಕೃಷಿಕಾರ್ಮಿಕರ ಈ ವಿಜಯ ಮಾಂಗ್ರೋಲ್ ತಾಲ್ಲೂಕು ಮಾತ್ರವಲ್ಲ. ಸೂರತ್ ಜಿಲ್ಲೆ ಯಾದ್ಯಂತ ಹೊಸ ಪ್ರೇರಣೆ ಉಂಟುಮಾಡಿದೆ. ಕೃಷಿಕಾರ್ಮಿಕರ ಸಂಘ ಹಾಗೂ ಕಿಸಾನ್‌ಸಭಾದ ಸದಸ್ಯತ್ವ ವೇಗದಿಂದ ಹೆಚ್ಚುತ್ತಿದೆಯೆಂದು ವರದಿಯಾಗಿದೆ.

## ಸುದ್ದಿ — ಸಮಾಚಾರ

## ವಿವಿಧರಾಜ್ಯಗಳಿಂದ

### ಉತ್ತರ ಪ್ರದೇಶ

### ಗುಜರಾತ್

### ಆಂಧ್ರಪ್ರದೇಶ

## ಐಕ್ಯ ರೈತ ಆಂದೋಲನ

ರೈತಾಪಿ ವರ್ಗದ ನಡುವೆ ಅಸಂತೃಪ್ತಿ ಹೆಚ್ಚುತ್ತಿರುವಂತೆಯೇ ಆಂಧ್ರ ಪ್ರದೇಶದಲ್ಲಿ ರೈತರ ಐಕ್ಯ ಆಂದೋಲನ ಮೊದಲ ಹೆಜ್ಜೆಯಿಡುತ್ತಿದೆ. ಜುಲೈ 22ರಂದು ಹೈದರಾಬಾದಿನಲ್ಲಿ ವಿವಿಧ ಕಿಸಾನ್ ಸಂಘಟನೆಗಳು ಏರ್ಪಡಿಸಿದ ಸಮಾವೇಶ ಇದಕ್ಕೆ ನಾಂದಿ ಹಾಕಿದೆ. ಕಾಂಗ್ರೆಸ್ (ಐ)ನ ಕಿಸಾನ್ ಸಂಘಟನೆಯೊಂದನ್ನು ಬಿಟ್ಟು ಬೇರೆಲ್ಲಾ ಸಂಘಟನೆಗಳ 6ಸಾವಿರ ರೈತ ಕಾರ್ಯಕರ್ತರು ಭಾಗವಹಿಸಿದ್ದ ಈ ಸಮಾವೇಶ ರೈತರ ತುರ್ತು ಸಮಸ್ಯೆಗಳನ್ನು ಚರ್ಚಿಸಿ ಎಂಟು ಬೇಡಿಕೆಗಳ ಒಂದು ಪಟ್ಟಿಯನ್ನು ತಯಾರಿಸಿ ಒಂದು ಕ್ರಿಯಾಸಮಿತಿಯನ್ನು ಕೂಡಾ ರಚಿಸಿತು.

AIKS ನ ರಾಜ್ಯ ಕಾರ್ಯದರ್ಶಿ ಕೊರಡಾಲಾ ಸತ್ಯನಾರಾಯಣ ಬೇಡಿಕೆಗಳ ಪಟ್ಟಿಯನ್ನೊಳಗೊಂಡ ಮುಖ್ಯ ನಿರ್ಣಯವನ್ನು ಮಂಡಿಸಿದರು. ಸಮಾವೇಶ ಇದನ್ನು ಅವಿರೋಧವಾಗಿ ಅಂಗೀಕರಿಸಿತು. ಬರಪೀಡಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ 200ಕೋಟಿ ರೂ. ತಕ್ಷಣ ನೀಡಿ, ಈ ಪ್ರದೇಶಗಳ ಎಲ್ಲಾ ಯೋಜನೆಗಳನ್ನು ತಕ್ಷಣಜಾರಿಗೊಳಿಸುವಂತಾಗಬೇಕು, ಬರಪೀಡಿತ ಪ್ರದೇಶಗಳಲ್ಲಿ ಬ್ಯಾಂಕ್ ಸಾಲಗಳ ಕಡ್ಡಾಯ ವಸೂಲಿಯನ್ನು ನಿಲ್ಲಿಸಬೇಕು, ವಿದ್ಯುತ್ ಬಿಲ್ಲುಗಳನ್ನು ರದ್ದು ಮಾಡಬೇಕು, ಬೀಜಗೊಬ್ಬರಗಳನ್ನು ಕಡಿಮೆ ದರದಲ್ಲಿ ಈ ಪ್ರದೇಶಗಳಲ್ಲಿ ಒದಗಿಸಬೇಕು, ಬೆಳೆ ವಿಮೆ ಯೋಜನೆಯನ್ನು ಸೂಕ್ತವಾಗಿ ಸುಧಾರಿಸಬೇಕು, ಉಂಬಳಿ ಜಮೀನಿಗೆ ಗೇಣಿ ಕಾನೂನಿಂದ ವಿನಾಯಿತಿ ನೀಡಬಾರದು, ಕಿಲೋಗೆ ಎರಡು ರೂಪಾಯಿ ಅಕ್ಕಿ ಯೋಜನೆಯನ್ನು ಬರಪೀಡಿತ ಪ್ರದೇಶಗಳ ಬಡ ರೈತರಿಗೂ ವಿಸ್ತರಿಸಬೇಕು, ನೀರಿನ ತೆರಿಗೆ ಹೆಚ್ಚಳದ ಕಾನೂನಿನಿಂದ ಸಣ್ಣ ರೈತರಿಗೆ ವಿನಾಯಿತಿ ನೀಡಬೇಕು ಹಾಗೂ ಸಾಕಷ್ಟು ಮೊದಲೆ ಪ್ರತಿಫಲದಾಯಕ ಬೆಲೆ ಗೊತ್ತುಪಡಿಸಿ ಅದನ್ನು ಜಾರಿಗೊಳಿಸಲು ಸೂಕ್ತ ವ್ಯವಸ್ಥೆ ಏರ್ಪಡಿಸಬೇಕು. ಇವೇ ಸಮಾವೇಶ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮುಂದಿಟ್ಟ ಬೇಡಿಕೆಗಳು. ಸಮಾವೇಶದ ನಂತರ ರೈತರ ಮತಪ್ರದರ್ಶನ ನಡೆದು ಒಂದು ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ಬೇಡಿಕೆಗಳನ್ನು ಸಲ್ಲಿಸಿತು.

ಈ ಬೇಡಿಕೆಗಳ ಈಡೇರಿಕೆಗೆ ಹಂತ–ಹಂತವಾದ ಕಾರ್ಯಕ್ರಮಗಳನ್ನು ಸಮಾವೇಶರೂಪಿಸಿತು. ಜಿಲ್ಲಾ ಮಟ್ಟದ ಸಮಾವೇಶಗಳು, ರಾಜ್ಯ ಮಟ್ಟದ ರೈತ ಮುಖಂಡರ ತಂಡದಿಂದ ರಾಜ್ಯಾದ್ಯಂತ ಪ್ರವಾಸ, ಸತ್ಯಾಗ್ರಹ, ಧರಣಿ ರಾಸ್ತಾರೋಕೊ. ರಾಜ್ಯ ಬಂದ್ ಇತ್ಯಾದಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರತಿಕ್ರಿಯೆಗಳನ್ನು ಗಮನದಲ್ಲಿಟ್ಟುಕೊಂಡು ಹಂತ–ಹಂತವಾಗಿ ನಡೆಸಲಾಗುವುದು.

## ಭೂಮಿಗಾಗಿ ಹೋರಾಟ

ವಿಜಯವಾಡಾದಲ್ಲಿ ಸಭೆ ಸೇರಿದ ಆಂಧ್ರ ಪ್ರದೇಶ ಕೃಷಿಕಾರ್ಮಿಕರ ಸಂಘದ ರಾಜ್ಯ ಕಾರ್ಯಕಾರಿ ಮಂಡಳಿ ಎಲ್. ಬಿ. ಗಂಗಾಧರರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಜ್ಯಾದ್ಯಾಂತ ಭೂಮಿಗಾಗಿ ಹೋರಾಟವನ್ನು ತೀವ್ರಗೊಳಿಸಲು ಕೃಷಿ ಕಾರ್ಮಿಕರಿಗೆ ಕರೆ ನೀಡಿದೆ.

ಮಿಗುತಾಯ ಜಮೀನನ್ನಾಗಲಿ, ಭೂಮಾಲಿಕರ ವಶವಿರುವ ಸರ್ಕಾರೀ ಜಮೀನನ್ನಾಗಲೀ, ಉಳುಮೆ ಯೋಗ್ಯವಾಗಿದ್ದರೂ ಬಂಜರು ಬಿದ್ದಿರುವ ಸರ್ಕಾರಿ ಜಮೀನಿನ್ನಾಗಲೀ ಇದುವರೆಗೂ ಬಹಳ ಕಡೆಗಳಲ್ಲಿ ವಿತರಣೆ ಮಾಡಲಾಗಿಲ್ಲ. ಕೃಷಿಕಾರ್ಮಿಕರು ಮತ್ತು ಬಡರೈತರು ಹೋರಾಟಕ್ಕಿಳಿದು ತ್ಯಾಗ ಬಲಿದಾನ ಮಾಡಿದ್ದಲ್ಲಿ ಮಾತ್ರ ಸ್ವಲ್ಪ ವಿತರಣೆಯಾಗಿದೆ ಈ ವಿಷಯದಲ್ಲಿ ತೆಲುಗುದೇಶಂ ಸರ್ಕಾರ ಕೂಡಾ ಹಿಂದಿನ ಕಾಂಗ್ರೆಸ್ (ಐ) ಸರ್ಕಾರಗಳ ದಾರಿಯಲ್ಲೇ ಸಾಗುತ್ತಿದೆ

ಆಗಸ್ಟ್ 15ರೊಳಗೆ ಬಂಜರು ಭೂಮಿಯನ್ನು ವಿತರಿಸುವುದಾಗಿ ತೆಲುಗು ದೇಶಂ ಸರ್ಕಾರ ಭರವಸೆ ನೀಡಿದ್ದರೂ, ಭೂವಿವಾದ ಹೋರಾಟಗಳ ಬಗ್ಗೆ ಅದರ ನಿಲುವು ಈ ಆಶ್ವಾಸನೆಯ ಟೊಳ್ಳುತನವನ್ನು ಆರಂಭದಲ್ಲೇ ಬಯಲಿಗೆಳೆದಿದೆ ಉದಾಹರಣೆಗೆ ಕೃಷ್ಣರಾವ್‌ಪಾಲೆ. ಎಂಬ ಗ್ರಾಮದಲ್ಲಿ, 34 ಎಕರೆ ಜಮೀನನ್ನು ಕಳೆದ ನಾಲ್ಕು ವರ್ಷಗಳಲ್ಲಿ ವಿತರಣೆ ಮಾಡಿಲ್ಲ. ಇದಕ್ಕಾಗಿ ಹೋರಾಟ ನಡೆಸಿದವರನ್ನು ವಿವಿಧ ಕೇಸುಗಳಲ್ಲಿ ಸಿಲುಕಿಸಲಾಗಿದೆ. ರಾಜ್ಯ ಕೃಷಿಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಎಂ. ಎಲ್.ಎ. ಪಿ. ರಾಮಯ್ಯನವರನ್ನು, ಕೂಡಾ ಬಂಧಿಸಲಾಯಿತು.

ಈಗ ಹಲವಾರು ಕಡೆ ಭೂಮಿಗಾಗಿ ಹೋರಾಟ ನಡೆಯುತ್ತಿದೆ. ಕೃಷ್ಣ ಜಿಲ್ಲೆಯಲ್ಲಿ ಎರ್ರಾಮನು ಗ್ರಾಮದಲ್ಲಿ ಆರು ಎಕ್ರೆ ಮಿಗುತೆ ಜಮೀನಿನಲ್ಲಿ ಬಡಜನರು ಕೃಷಿಕಾರ್ಮಿಕರ ಸಂಘದ ನೇತೃತ್ವದಲ್ಲಿ ವಶಪಡಿಸಿಕೊಂಡಿದ್ದಾರೆ. ಕೊರ್ಲ್ಲಮಂಡಾ ಗ್ರಾಮದಲ್ಲಿ ಭೂಮಾಲೀಕರ ಹಾಗೂ ಶ್ರೀಮಂತ ರೈತರ ಅಧೀನದಲ್ಲಿದ್ದ 4: ಎಕ್ರೆ ಜಂಬರು ಭೂಮಿಯನ್ನು ಬಡರೈತರು ವಶಪಡಿಸಿಕೊಂಡಿದ್ದಾರೆ. ನುಜೀವಿಡ್‌ನಲ್ಲಿ 25 ಎಕ್ರೆ ಸಾಳು ಜಮೀನನ್ನು ಕೃಷಿ ಕಾರ್ಮಿಕರು ತಮ್ಮ ವಶಪಡಿಸಿಕೊಂಡಿದ್ದಾರೆ.

ಉಡುಪಿ

## ತನಿಖೆಗೆ ರೈತರ ಒತ್ತಾಯ

ಸ್ಕೇಡ್ಸ್ ಸಂಸ್ಥೆಯಲ್ಲಿ ಆಗಿದೆಂದು ಹೇಳಲಾಗುತ್ತಿರುವ ಲಕ್ಷಾಂತರ ರೂಪಾಯಿಯ ಅವ್ಯವಹಾರದ ತನಿಖೆ ನಡೆಯುವಂತೆಯೂ ಪಂಪಸೆಟ್ ಮತ್ತಿತರ ಉಪಕರಣಗಳನ್ನು ರೈತರು ಸ್ಕೇಡ್ಸ್ ಮೂಲಕವೇ ಪಡೆಯಬೇಕೆಂಬ ನಿರ್ಬಂಧವನ್ನು ಸಡಲಿಸಬೇಕೆಂದೂ ಅದನ್ನ ಪಡೆಯಲು ರೈತರಿಗೆ ಹಕ್ಕಿರಬೇಕೆಂದು 15-8-86ರಂದು ಜರುಗಿದ ಉಡುಪಿ ತಾಲ್ಲೂಕ ರೈತ ಸಂಘದ ಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸಲಾಯಿತು.

1-8-86 ರಂದು ಸರ್ಕಾರ[illegible] ತಹಶಿಲ್ದಾರರ ಮೂಲಕ ಸಲ್ಲಿಸಲಾ[illegible] ಕೇಳಿಕೆಗಳನ್ನು ಒತ್ತಾಯಿಸುವ[illegible] ಗ್ರಾಮ ಮಟ್ಟದಲ್ಲಿ ರೈತರ ಸಭೆಗಳನ್ನು ನಡೆಸಿ ಚಳುವಳಿ ತಯಾರಿ ನಡೆಸುವ[illegible] ನಿರ್ಣಯ ಮಾಡಲಾಯಿತು.

# ಬರ ಪ್ರದೇಶ ರೈತರಿಗೆ ಕಾರ್ಮಿಕರಿಂದ ಜೋಳ ವಿತರಣೆ

ಆಗಸ್ಟ್ 29 ರಂದು ಬಿಜಾಪುರ ಜಿಲ್ಲೆಯ ರೈತರಿಗೆಲ್ಲ ಸ್ಫೂರ್ತಿದಾಯಕ ದಿನ ಅವರ ಉತ್ಸಾಹ ಉಕ್ಕಿ ಹೊರ ಹೊಮ್ಮುತ್ತಿತ್ತು. ಮುಖಂಡರಿಗೆ ಅತ್ಯಪೂರ್ವ ಸನ್ಮಾನ, ರೂಢಿಯಂತೆ ಮುಖಂಡರಿಗೆ ಕೊಡದ ನೀರು ಸ್ನಾನ, ಹುಡುಗಿಯರಿಂದ ಆರತಿ, ಕೊಂಬು ಕಹಳೆ, ಡೊಳ್ಳು ವಾದನಗಳ ಮಧ್ಯೆ ಬೃಹತ್ ಮೆರವಣಿಗೆ, ಸಭೆ. ಅನಂತರ ಜೋಳ ವಿತರಣೆ.

ಬೆಂಗಳೂರಿನ ಮೈಕೋ ಕಾರ್ಮಿಕರು ಬರಪೀಡಿತ ಜನರಿಗೆ ಜೋಳ--ರಾಗಿ ಹಂಚುವ ಸಲುವಾಗಿ ಒಂದು ದಿನದ ವೇತನ ಕೊಡಿಸಿದ್ದರು. ಬಿಜಾಪುರ ಜಿಲ್ಲೆಯ ಇಂಡಿ, ನಾಗಠಾಣೆ, ಒಕ್ಕುಂಡಿ, ಶಿರಬೂರ ಈ ನಾಲ್ಕು ಕೇಂದ್ರಗಳಲ್ಲಿ 110 ಕ್ವಿಂಟಾಲ್ ಜೋಳವನ್ನು 5 ರಿಂದ 10 ಕಿಲೋ ದಂತೆ ಸಾವಿರಾರು ಬಡರೈತರಿಗೆ ವಿತರಣೆ ಮಾಡಲಾಯಿತು. ರೈತಸಂಘದ ಕಾರ್ಯಕರ್ತರು ಆ ಕೇಂದ್ರಗಳ ಸುತ್ತಮುತ್ತ ಹಳ್ಳಿಗಳಲ್ಲಿ ಬಡವರನ್ನು ಗುರ್ತಿಸಿ ಚೀಟಿ ಕೊಟ್ಟದ್ದು ಅದರಂತೆ ವ್ಯವಸ್ಥಿತವಾಗಿ ಕಾರ್ಯಕ್ರಮ ನಡೆಯಿತು. ನಾಲ್ಕು ಕೇಂದ್ರಗಳಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಸಿ.ಐ.ಟಿ.ಯು. ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್, ಸಿ ಪಿ ಐ. (ಎಂ) ಮುಖಂಡರಾದ ಎನ್. ಕೆ. ಉಪಾಧ್ಯಾಯ ರೈತ ಸಂಘದ ಅಧ್ಯಕ್ಷ ಭೀಮ್‌ಸಿ ಕಲಾದಗಿ, ಮೈಕೊ ಯೂನಿಯನ್ ಕಾರ್ಯದರ್ಶಿ ವೀರಸ್ವಾಮಿ, ಉಪಾಧ್ಯಕ್ಷ ಶಂಕರೇಗೌಡ, ಶೇಷಪ್ಪ, ದೊರೆಸ್ವಾಮಿ ಮೊದಲಾದವರು ಭಾಷಣ ಮಾಡಿ, 5 ಕೆ. ಜಿ. ಜೋಳ ದಾನ ಮಾಡುವುದರಿಂದ ಅವರು ಉದ್ಧಾರ ಆಗುತ್ತಾರೆಂದು ಯಾರು ತಿಳಿದಿಲ್ಲವೆಂದು, ಕಾರ್ಮಿಕರ-ರೈತರ ಸಖ್ಯತೆಯನ್ನು ಬೆಳೆಸಿ, ರೈತರ ಹೋರಾಟಕ್ಕೆ ಕಾರ್ಮಿಕರು, ಕಾರ್ಮಿಕರ ಹೋರಾಟಕ್ಕೆ ರೈತರು ಸಹಾಯ ಮಾಡಿದರೆ ಮಾತ್ರ ಬಂಡವಾಳಶಾಹಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೊಗೆದು ರೈತ-ಕಾರ್ಮಿಕರ ಹಿತ ಸಾಧಿಸುವ ಸರ್ಕಾರ ರಚಿಸಲು ಸಾಧ್ಯವೆಂದು ಹೇಳಿ ರೈತರು ತಮ್ಮ ಹೋರಾಟ ಮುಂದುವರಿಸಬೇಕೆಂದು ಕರೆ ನೀಡಿದರು.

## ಜನತಾ ಸರ್ಕಾರ ಕಾಂಗ್ರೆ ದಾರಿ ತುಳಿಯುತ್ತಿದೆಯೇ?

ರೈತರನ್ನು ಕೊಂದ ಗುಂಡೂರಾವ್ ಸರ್ಕಾರವನ್ನು ಕಿತ್ತೊಗೆದು ಜನತಾ ಸರ್ಕಾರವನ್ನು ಆರಿಸಿ ತಂದಿದ್ದರೂ ಕೂಡ, ಈ ಸರ್ಕಾರದಿಂದ ಜನರ ಸಮಸ್ಯೆಗಳು ಬಗೆಹರಿಯುತ್ತಿಲ್ಲ. ಬರಗಾಲ ಪರಿಹಾರಕ್ಕೆ ಶಾಶ್ವತ ಪರಿಹಾರ ವಿಲ್ಲ. ನೀರಾವರಿ ಯೋಜನೆಗಳಿಗೆ ಪ್ರಾಧಾನ್ಯತೆಯಿಲ್ಲ. ಕಾಂಗ್ರೆ ಪಕ್ಷ ಜಾತಿಯ-ಮತೀಯ ಶಕ್ತಿಗಳನ್ನವಲಂಬಿಸಿ ತನ್ನ ಅಸ್ತಿತ್ವ ಉಳಿಸಿಕೊಳ್ಳುತ್ತಿದೆ. ದೇಶದ ಸಮಗ್ರತೆಗೆ ಇದರಿಂದ ಅಪಾಯ ಉಂಟಾಗಿದೆ ಕಾರಣ ರೈತ-ಕಾರ್ಮಿಕರ ಐಕ್ಯತೆ ಬೆಳೆದು ಹೊಸ ಸರ್ಕಾರ ನಿರ್ಮಾಣಕ್ಕೆ ದುಡಿಯಬೇಕೆಂದು ಸಿ.ಪಿ ಐ. (ಎಂ) ಮುಖಂಡರಾದ ಎಸ್. ಸೂರ್ಯನಾರಾಯಣ ರಾವ್ ಅವರು ಆ 29 ರಂದು ಸಂಜೆ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಕರೆ ನೀಡಿದರು, ಎನ್. ಕೆ. ಉಪಾಧ್ಯಾಯ, ಭೀಮ್‌ಸಿಕಲಾದಗಿ, ವೀರಸ್ವಾಮಿ, ಆಂಧ್ರ ಸ್ಟೀಲ್‌ನಲ್ಲಿ, ನೌಕರಿ ಕಳೆದುಕೊಂಡ ರಮೇಶ್, ಎಸ್. ಎಫ್. ಐ. ಮುಖಂಡ ಕುಲಕರ್ಣಿ ಮೊದಲಾದವರು ಭಾಷಣ ಮಾಡಿದರು.

## ಉಚ್ಚ ಶಿಕ್ಷಣದಲ್ಲಿ ಬಿಕ್ಕಟ್ಟು-
## ಧಾರವಾಡದಲ್ಲಿ ಅಧ್ಯಯನ ಶಿಬಿರ

10-8-86 ರಂದು "ಕರ್ನಾಟಕದ ಸಮಾಜ ವಿಜ್ಞಾನ ಕೇಂದ್ರ"ದ ಆಶ್ರಯದಲ್ಲಿ ಧಾರವಾಡದ ವಿಶ್ವ ವಿದ್ಯಾನಿಲಯದ ಶೈಕ್ಷಣಿಕ ಕಾಲೇಜಿನಲ್ಲಿ "ಉಚ್ಚ ಶಿಕ್ಷಣದಲ್ಲಿ ಬಿಕ್ಕಟ್ಟು – ಹೊಸ ಶಿಕ್ಷಣ ನೀತಿಯ ವಿಮರ್ಶಾತ್ಮಕ ಸಮೀಕ್ಷೆಯ ಕುರಿತು ಒಂದು ವಿಚಾರ ಪೂರಿತವಾದ ಅಧ್ಯಯನ ಶಿಬಿರ ನಡೆಯಿತು. ಹೊಸಶಿಕ್ಷಣ ನೀತಿಯ ಕುರಿತು. ಕೇಂದ್ರವು ಹಮ್ಮಿಕೊಂಡ ಮೂರು ಹಂತದ ಅಧ್ಯಯನ ಶ್ರೇಣಿಯಲ್ಲಿ ಇದು ಎರಡನೆಯದಾಗಿದೆ. ಮೊದಲನೇಯದಾಗಿ, ಗ್ರಾಮೀಣ ಮತ್ತು ಮಾಧ್ಯಮಿಕ ಶಿಕ್ಷಣದ ಬಗ್ಗೆ ಜೂನ್ 86ರಲ್ಲಿ ಉಪನ್ಯಾಸಗಳಾದವು. ಮುಂದೆ, ವಿಶ್ವವಿದ್ಯಾನಿಲಯಗಳ ಶಿಕ್ಷಕರ ಮತ್ತು ಶಿಕ್ಷಕೇತರ ನೌಕರರ ಆಂದೋಳನದ ಕುರಿತು ವಿಚಾರ ಸಂಕೀರಣ ನಡೆಯಲಿದೆ.

ಅಧ್ಯಯನ ಶಿಬಿರವನ್ನು ಉದ್ಘಾಟಿಸುತ್ತಾ, ಕ. ವಿ. ಯದ ತತ್ವಜ್ಞಾನ ವಿಭಾಗದ ಪ್ರೊ. ಕೆ. ಜೆ. ಷಾ ಅವರು ಶಿಕ್ಷಣ ಸಮಸ್ಯೆಯು ಒಂದು ಅತ್ಯಂತ ಜಟಿಲವಾದದು. ವಿಶ್ವವಿದ್ಯಾನಿಲಯಗಳ ಶಿಕ್ಷಕರೇ ಈ ಕುರಿತು ಗಂಭೀರವಾಗಿ ಚಿಂತನೆ ಮಾಡುತ್ತಿಲ್ಲ. ಮತ್ತು ಪರ್ಯಾಯ ಮಾರ್ಗ ಕಂಡು ಕೊಳ್ಳಲು ತಮ್ಮನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳುತ್ತಿಲ್ಲ ಪರಿಣಾಮವಾಗಿ ಇಂದು ಸರಕಾರಿ ಅಧಿಕಾರಿಗಳು ರೂಪಿಸಿದ ಹೊಸಶಿಕ್ಷಣನೀತಿಯನ್ನೇವಿದ್ವತ್ ಜನರು ಚರ್ಚಿಸುವ ಅಸಹಾಯಕ ಪರಿಸ್ಥಿತಿ ಬಂದಿದೆ ಎಂದು ವಿಷಾದಿಸಿದರು. ಹೊಸ ಶಿಕ್ಷಣ ನೀತಿ ನಿರೂಪಣೆಯಲ್ಲಿ ಪಾಶ್ಚಾತ್ಯ ಮತ್ತು ಪೌರಾತ್ಯ ದೇಶಗಳ ಅಂಧ ಅನುಕರಣೆ ಮಾಡಬಾರದು, ನಮ್ಮ ದೇಶದ ಪ್ರಾಚೀನ ಹಾಗೂ ಐತಿಹಾಸಿಕ ಹಿನ್ನೆಲೆಗಳನ್ನೂ, ತಿಲಕ್ ಗಾಂಧಿ, ವಿನೋಭಾ, ಠಾಗೋರ್ ಅಂಬೇಡ್ಕರ್ ಮುಂತಾದ ರಾಷ್ಟ್ರನಾಯಕರ ಮಹಾನ್ ಕೊಡುಗೆಗಳನ್ನೂ ಆಳವಾಗಿ ಅಧ್ಯಯನ ಮಾಡಬೇಕು. ಧೈರ್ಯವಾಗಿ ಆತ್ಮವಿಶ್ವಾಸದಿಂದ ಬೇಡವಾದುದನ್ನು ತ್ಯಜಿಸಬೇಕು ಮತ್ತು ಬೇಕಾದುದನ್ನು ಸ್ವೀಕರಿಸಬೇಕು. ಎಂದು ಕರೆ ಕೊಟ್ಟರು.

"ಕೇಂದ್ರ"ದ ನಿರ್ದೇಶಕರಾದ, ಕ.ವಿ ಯದ ತತ್ವಜ್ಞಾನ ವಿಭಾಗ ನಿವೃತ್ತ ಡಾ. ವಿ. ಎನ್. ದೇಶಪಾಂಡೆಯವರು ಅಧ್ಯಯನ ಶಿಬಿರಕ್ಕೆ ಪೂರ್ವಕವಾಗಿ ಒಂದು ಮುನ್ನೋಟ ಪ್ರಬಂಧವನ್ನು ಮಂಡಿಸಿದರು. 1966ರಷ್ಟು ಹಿಂದೆಯೇ ಶಿಕ್ಷಣ ಆಯೋಗವು ಭಾರತದ ಶಿಕ್ಷಣ ನೀತಿಯು ಜನ ಜೀವನದ ಅಗತ್ಯಗಳಿಗೆ ಮತ್ತು ಆಶೋತ್ತರಗಳಿಗೆ ಸಂಬಂಧಿಸಿಲ್ಲ ಎಂದು ಉದ್ಗರಿಸಿರುವುದನ್ನು ನೆನಪಿಸಿದರು. ಮುಂದೆ ಅಖಿಲ ಭಾರತ ಮಟ್ಟದಲ್ಲಿ ನಡೆದ ಅನೇಕ ಚರ್ಚೆ, ವಿಚಾರ ಸಂಕೀರಣ,ಅಧ್ಯಯನ ಶಿಬಿರಗಳಲ್ಲಿಯೂ ಮತ್ತು ಯು. ಜಿ. ಸಿ. ಹಾಗೂ ಐ. ಸಿ. ಎಸ್. ಆರ್. ನಡೆಸಿದ 'ರಿಲೆವೆನ್ಸ್' ಅಧ್ಯಯನಗಳಲ್ಲಿಯೂ ಇದೇ ಪ್ರಶ್ನೆಯನ್ನ ಪುನರ್ ಪ್ರಸ್ತಾಪಿಸಲಾಗುತ್ತಿತ್ತು ಎಂದರು. ಶಿಕ್ಷಣದ ಗತಿ ಮತ್ತು ವಸ್ತುವನ್ನು ಜನಪರವಾಗಿ ಆ ಮೂಲಾಗ್ರವಾಗಿ ಬದಲಾಯಿಸುವುದರಲ್ಲಿ ಏನೇನೂ ಸಾಧನೆಯಾಗಲಿಲ್ಲ. ಭಾರತದ ಸದ್ಯದ ಸಾಮಾಜಿಕ. ಆರ್ಥಿಕ ರಾಜಕೀಯ ಚೌಕಟ್ಟಿನಲ್ಲಿ ಶಿಕ್ಷಣ ಯಾರ ಹಿತಾಸಕ್ತಿಯಾಗಿದೆ ಎಂಬ ಮೂಲ ಭೂತ ಪ್ರಶ್ನೆಯನ್ನು ಇನ್ನು ಮುಂದೆ ಅಲಕ್ಷಿಸುವಂತಿಲ್ಲ, ಶಿಕ್ಷಣ ಪದ್ಧತಿಯ ತಾತ್ವಿಕ ತಳಪಾಯವನ್ನೇ ಕೆದಕುವುದು ಅನಿವಾರ್ಯ ಎಂದರು. ಶಿಕ್ಷಣವು ಸಮಾಜದ ಆಳುವ ಪ್ರತಿಷ್ಠಿತ ವರ್ಗದ ಹಿತಾಸಕ್ತಿಗಾಗಿದೆ, ಶಿಕ್ಷಣ ಸಂಸ್ಥೆಗಳು ವಿಷಯ ಸಂಗ್ರಹಣೆಯ ವಿತರಣೆಯ ಕಾರಖಾನೆಗಳಾಗುತ್ತವೆ ಎಂದು ಸಭಿಕರ ಗಮನ ಸೆಳೆದರು.

ಅಧ್ಯಯನ ಶಿಬಿರದ .ಪ್ರಥಮ ಅಧಿವೇಶನವು 'ವಿಜ್ಞಾನ ಮತ್ತು

(7ನೇ ಪುಟ ನೋಡಿ)

# ಸಾರ್ವಜನಿಕ ಉದ್ದಿಮೆ ರಕ್ಷಣೆಗೆ ಪಣ

ಸಾರ್ವಜನಿಕ ವಲಯದ ಪ್ರಧಾನ ಹಣಕಾಸಿನ ಸಂಸ್ಥೆಯಾದ ಎಲ್.ಐ.ಸಿ. ಇದೇ ಸೆಪ್ಟಂಬರ್ 1 ರಂದು ಮುವತ್ತು ವರ್ಷಗಳನ್ನು ಪೂರ್ಣಗೊಳಿಸಿತು. ಈ ಸಂದರ್ಭದಲ್ಲಿ ಈ ಸಾರ್ವಜನಿಕ ಉದ್ದಿಮೆಯ ಮೂರು ದಶಕಗಳ ಸಾಧನೆಯನ್ನು ಇತ್ತೀಚೆಗೆ ಇಂತಹ ಉದ್ದಿಮೆಗಳ ಮೇಲೆ ಮಾಡಲಾಗುತ್ತಿರುವ ಹಲ್ಲೆಗಳ ಹಿನ್ನೆಲೆಯಲ್ಲಿ ಜನತೆಯ ಮುಂದಿಡಲು ಬೆಂಗಳೂರಿನ ಪುರಭವನದಲ್ಲಿ ಸೆಪ್ಟಂಬರ್ 1 ರಂದು "ಸಾರ್ವಜನಿಕ ವಲಯ ರಕ್ಷಿಸಿ" ಎಂಬ ವಿಷಯದ ಮೇಲೆ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಲಾಯಿತು. 35 ವರ್ಷಗಳ ಹಿಂದೆ ವಿಮೆಯ ರಾಷ್ಟ್ರೀಕರಣಕ್ಕಾಗಿ ಹೋರಾಟ ನಡೆಸಿದ ಅಖಿಲ ಭಾರತ ವಿಮಾ ನೌಕರರ ಸಂಘಕ್ಕೆ ಸೇರಿದ ಬೆಂಗಳೂರು ವಿಭಾಗದ ವಿಮಾ ಕಾರ್ಪೊರೇಶನ್ ನೌಕರರ ಸಂಘ ಇದನ್ನು ಏರ್ಪಡಿಸಿತ್ತು.

ವಿಚಾರ ಸಂಕಿರಣದಲ್ಲಿ ಸಂಘದ ಪರವಾಗಿ ಪ್ರಬಂಧವನ್ನು ಮಂಡಿಸುತ್ತಾ ಪ್ರಧಾನ ಕಾರ್ಯದರ್ಶಿ ಅಮಾನುಲ್ಲಾ ಖಾನ್ ಭಾರತದಲ್ಲಿ ವಿಮಾ ಉದ್ಯಮದ ಆರಂಭ, ಬೆಳವಣಿಗೆ, ರಾಷ್ಟ್ರೀಕರಣಕ್ಕಾಗಿ ಹೋರಾಟ ಇವುಗಳ ಸ್ಥೂಲ ಚಿತ್ರಣ ನೀಡಿ ರಾಷ್ಟ್ರೀಕರಣದ ನಂತರ ಎಲ್. ಐ. ಸಿ. ಯ ಸಾಧನೆಗಳನ್ನು ವಿವರಿಸಿದರು. 1956ರಲ್ಲಿ 3ನೇ ದರ್ಜೆ ನೌಕರರು ತಲಾ 276 ಪಾಲಸಿಗಳ ಸೇವೆಯಲ್ಲಿ ತೊಡಗಿದ್ದರೆ 1983 ರಲ್ಲಿ ಅದು 608 ಕ್ಕೇರಿತು ಎಂಬ ಸಂಗತಿಯತ್ತ ಗಮನ ಸೆಳೆದ ಪ್ರಧಾನ ಕಾರ್ಯದರ್ಶಿಗಳು ಎಲ್.ಐ ಸಿ. ಯ ಯಶಸ್ವಿಯಲ್ಲಿ ನೌಕರರ ಮುಖ್ಯ ಪಾತ್ರವನ್ನು ವಿವರಿಸಿದರು. ಕಮ್ಮಿ ಬೋನಸ್, ಹೆಚ್ಚು ಪ್ರಿಮಿಯಂ ಬಗ್ಗೆ ಸಾರ್ವಜನಿಕರ ಟೀಕೆಯನ್ನೂ ಸರಿಯೆಂದು ಹೇಳಿ, ಇದನ್ನು ಸರಿಪಡಿಸಿ ಉತ್ತಮಪಡಿಸಲು ಇರುವ ಅವಕಾಶಗಳ ಬಗ್ಗೆ ಹೇಳುತ್ತಾ ಕೇಂದ್ರ ಸರ್ಕಾರ ಹಾಗೂ ಎಲ್. ಐ. ಸಿ ಆಡಳಿತ ಈಗಲಾದರೂ ತಮ್ಮ ಇದುವರೆಗಿನ ನೀತಿಯನ್ನು ಬದಲಿಸಿ ಜೀವ ವಿಮೆಯನ್ನು ಹೆಚ್ಚು ಆಕರ್ಷಕಗೊಳಿಸುವುದೆಂದು ಆಶಿಸಿದರು. ವಿಮಾ ಉದ್ದಿಮೆಯೂ ಸೇರಿದಂತೆ ಹಲವಾರು ಉದ್ದಿಮೆಗಳನ್ನು ಸಾಮ್ರಾಜ್ಯಶಾಹೀ ಹಣಕಾಸು ಸಂಸ್ಥೆಗಳ ಒತ್ತಡದಿಂದ ಖಾಸಗಿಯವರಿಗೆ ತೆರೆಯುವ ಅಪಾಯದತ್ತ ಜನರ ಗಮನ ಸೆಳೆಯುತ್ತಾ, ಇಂತಹ ಹಲ್ಲೆಗಳನ್ನು ತಡೆದು ಸಾರ್ವಜನಿಕ ವಲಯದಲ್ಲಿನ ಕೊಳೆಯನ್ನು ನಿವಾರಿಸಿ, ಅಧಿಕಾರಶಾಹೀ ಹಿಡಿತದಿಂದ ಅದನ್ನು ರಕ್ಷಿಸಿ, ಅದರ ಉದ್ದೇಶ ಸಾಧನೆಗೆ ನೆರವಾಗುವಂತೆ ಎಲ್ಲಾ ದೇಶಪ್ರೇಮಿ ಶಕ್ತಿಗಳು ಪ್ರಯತ್ನಿಸಬೇಕೆಂದು, ಎಲ್.ಐ ಸಿ. ನೌಕರರು 30 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಈ ಬಗ್ಗೆ ಪಣ ತೊಡುವುದಾಗಿ ಪ್ರಧಾನ ಕಾರ್ಯದರ್ಶಿಗಳು ಹೇಳಿದರು

ಇದಕ್ಕೆ ಮೊದಲು ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕರ್ನಾಟಕದ ಗ್ರಾಮೀಣ ಅಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್ 90-./. ಜನರನ್ನು ನಿರ್ಲಕ್ಷಿಸುವ, ತಪ್ಪು ಆಧ್ಯತೆಗಳ, ಮಾರುಕಟ್ಟೆ ಆರ್ಥಿಕತೆಯ ದೃಷ್ಟಿಯ ಹೊಸ ಆರ್ಥಿಕ ನೀತಿಯನ್ನು ಟೀಕಿಸಿ ರಾಷ್ಟ್ರೀಕೃತ ಉದ್ದಿಮೆಗಳು ಕೇವಲ ಸರಕಾರಿ ಉದ್ದಿಮೆಗಳಾಗಿ ಉಳಿದಿದ್ದರೂ, ಅವುಗಳ ಉದ್ದೇಶ ಸಾಧನೆಗಾಗಿ ಅವುಗಳ ರಕ್ಷಣೆ ಅಗತ್ಯವೆಂದು ನುಡಿದರು.

ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಸಿ. ಐ. ಟಿ. ಯು, ಪರವಾಗಿ ಮಾತನಾಡಿದ ಕಾಂ. ಸೂರ್ಯನಾರಾಯಣ ರಾವ್ ಅವರು ಸಾರ್ವಜನಿಕ ವಲಯಗಳಿಗೂ ಸ್ವಾತಂತ್ರ್ಯಕ್ಕೂ ನಡುವಿನ ಸಂಬಂಧದ ಬಗ್ಗೆ ಹೇಳಿ ಅಲಿಪ್ತ ನೀತಿಯನ್ನು ರಕ್ಷಿಸಲು, ಬಹುರಾಷ್ಟ್ರೀಯ ಸಂಸ್ಥೆಗಳ ಹಲ್ಲೆಗಳನ್ನು ತಡೆಯಲು ಮತ್ತು ವಿಶ್ವಶಾಂತಿಗಾಗಿ ಸಾರ್ವಜನಿಕ ಉದ್ದಿಮೆಯ ರಕ್ಷಣೆ ಅತ್ಯಗತ್ಯ ಮತ್ತು ಈ ಜವಾಬ್ದಾರಿಯನ್ನು ಕಾರ್ಮಿಕ ವರ್ಗವಷ್ಟೇ ಮಾಡಬಲ್ಲದು ಎಂದರು. ತಾಂತ್ರಿಕ ಅವಕಾಶಬಂದಾಗ ಕಾರ್ಮಿಕ ವರ್ಗ ತನ್ನ ಸೀಮಿತ ಅರಿವನ್ನು ಮೀರಿ ನಿಲ್ಲಬಲ್ಲದೆಂಬುದಕ್ಕೆ ಈ ವಿಚಾರ ಸಂಕಿರಣ . ಉದಾಹರಣೆಯೆಂದ ಕರ್ನಾಟಕ ಪ್ರಾಂತ ರೈತ ಸಂಘದಪ್ರಧಾನಕಾರ್ಯದರ್ಶಿ ಪಿ. ರಾಮಚಂದ್ರರಾಯರು ಈ ಬಗ್ಗೆ ಗ್ರಾಮಾಂತರದಲ್ಲಿ ಪ್ರಚಾರ ನಡೆಸಿ ತಳಹದಿಯನ್ನು ಗಟ್ಟಿಗೊಳಿಸಬೇಕು ಎಂದರು. ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದ ಇತರ ಭಾಷಣಕಾರರಾದ 'ಕನ್ನಡ ಪ್ರಭ' ದ ಸಂಪಾದಕರಾದ ಖಾದ್ರಿ ಶಾಮಣ್ಣ, ಎ. ಐ ಟಿ. ಯು. ಸಿ. ಯ ಬಾಬು ಮ್ಯಾಥ್ಯೂ ಹಾಗೂ ಹೆಚ್. ಎಮ್. ಕೆ. ಪಿ. ಯ ಮೈಕೆಲ್ ಫರ್ನಾಂಡೀಸ್ ಕೂಡಾ ಆರ್ಥಿಕ ನೀತಿಯನ್ನು ಖಂಡಿಸಿ, ಸಾರ್ವಜನಿಕ ಉದ್ದಿಮೆಗಳ ರಕ್ಷಣೆಯ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ○

# ಪಟಾಕಿಯವನು

## ದೃಶ್ಯ—1

[ಬಯಲಿನಲ್ಲಿ ನಾಲ್ಕು ಮಂದಿ ಯುವಕರು ಕ್ರಿಕೆಟ್ ಆಡುತ್ತಿದ್ದಾರೆ. ಸಾಯಂಕಾಲದ ಹೊತ್ತು ಆಫೀಸಿನಿಂದ ಫೈಲುಗಳು ಬ್ಯಾಗುಗಳೊಂದಿಗೆ ಇಬ್ಬರು ಮಧ್ಯವಯಸ್ಸಿನವರು ಮನೆಗೆ ಹಿಂದಿರುಗುತ್ತಿದ್ದಾರೆ. ಒಬ್ಬ ಮುದುಕ ಆ ಯುವಕರನ್ನು ಗಮನಿಸಿ ಹೋಗುತ್ತಿದ್ದಾನೆ]

ಮುದುಕ : ನೋಡ್ರಪ್ಪಾ ಸ್ವಲ್ಪ ಸುತ್ತಮುತ್ತ ನೋಡ್ಕೊಂಡು ಆಟ ಆಡಿ. ದಾರಿ ಹೋಕರ ಮೇಲೆ ಚೆಂಡು ಬೀಳದಂತೆ ನೋಡಿಕೊಳ್ಳಿ. ನಿಮ್ಮ ಆಟ ಅತಿರೇಖಕ್ಕೆ ಹೋಗದಂತೆ ಆಡಿ. (ಮುದುಕ ನಡ್ಕೊಂಡು ಹೋಗುತ್ತಾನೆ)

ತಂದೆ 1 : ಅಲ್ಲಿ ನೋಡಿ, ನಮ್ಮ ಹುಡುಗರಿಬ್ಬರೂ ವೈ ಬೆವರಿಳಿಯುವಂತೆ ಕ್ರಿಕೆಟ್ ಆಡುತ್ತಿದ್ದಾರೆ. ಹೊತ್ತು ಮುಳುಗುತ್ತಾ ಬಂತು.

ತಂದೆ 2 : ಇವತ್ತು ಶನಿವಾರ. ಮಧ್ಯಾಹ್ನದವರೆಗೆ ಮಾತ್ರ ಶಾಲೆ. ಮಟ ಮಟ ಮಧ್ಯಾಹದ ಬಿಸಿಲಿನಿಂದ ಆಟ ಆಡುತ್ತಿದ್ದಾರಂತ ಕಾಣುತ್ತೆ.

ತಂದೆ 1 : ಇವರೊಂದಿಗೆ ಆಟ ವಾಡುತ್ತಿರುವ ಇನ್ನಿಬ್ಬರು ಹುಡುಗರು ಯಾರು ?

ತಂದೆ 2 : ಪಕ್ಕದ ಬೀದಿಯವರು.

ತಂದೆ 1 : ಆಟ ಮುಗಿಸುತ್ತಿರುವ ಹಾಗಿದೆ. ನಾವು ಬರುತ್ತಿರುವುದನ್ನು ನೋಡಿದ್ರೂಂತ ಕಾಣುತ್ತೆ. ಕೇಳಿಸ್ತಾ, ನಮ್ಮ ಹುಡುಗರು ಹಾಡುತ್ತಿದ್ದಾರೆ. ಅದು ಯಾವ ಹಾಡುಂತ ಗೊತ್ತಲ್ಲ ನಿಮಗೆ ?

ತಂದೆ 2 : ಹೌದು ಗೊತ್ತಿದೆ. ನಾವು ಚಿಕ್ಕವಯಸ್ಸಿನಿಂದ ಹಾಡುತ್ತಿರುವ ಹಾಡು. ನಾವೇ ತಾನೇ ಅವರಿಗೆ ಹೇಳಿ ಕೊಟ್ಟಿದ್ದು (ಹುಡುಗರು ಹಾಡುತ್ತಿದ್ದಾರೆ)

ಯುವಕ 1 :

ಬಿಳಿಯ ಬಣ್ಣದ ಹೆಣ್ಣು ಬೆಕ್ಕು
ಮುದದಿ ನಮ್ಮ ಮನೆಯಲಿರುವುದು
ನೀವು ಎಲ್ಲರೂ ಕಂಡ ಇದುವಿಂ
ನಮ್ಮ ಒಡನದಾಟವು

ಯುವಕ 2 :

ಗಬ್ಬವಾದ ಹೆಣ್ಣು ಬೆಕ್ಕು
ಹಬ್ಬದಾ ದಿನ ನಮ್ಮ ಮನೆಯಲಿ
ಪುಟಸು ಕುಣಿಯುವ ಬಣ್ಣ ಬಣ್ಣದ
ಮರಿಗಳನದು ಇಕ್ಕಿತು.

ಯುವಕ : 1

ಒಂದು ಬಣ್ಣ ಮೇಲು ಎಂದು
ಮತ್ತೊಂದು ಬಣ್ಣವು ಕೀಳು ಎಂದು
ಮರಿಗಳಲ್ಲಿ ಬೇಧವನ್ನು
ತಾಯಿಬೆಕ್ಕದು ಎಣಿಸಿತೇ

(ತಂದೆಯಂದಿರಿಬ್ಬರೂ ಹಾಡು ಕೇಳುತ್ತಾ ಹೋಗುತ್ತಿದ್ದಾರೆ)

ಯುವಕ 4 : ಏಯ್ ನಿಲ್ಲಿಸ್ರಯ್ಯಾ ಸಾಕು. ಶುರುಮಾಡಿ ಬಿಟ್ರು ಬ್ಯಾ ಅಂತ ಒದರ್ಲಿಕ್ಕೆ.

ಯುವಕ 3 : ಈ ಹಾಡನ್ನು ನಿಮಗೆ ಯಾರೋ ಹೇಳಿಕೊಟ್ರು ?

ಯುವಕ 4 : ಒಂದೇ ಹಾಡನ್ನು ನೀವಿಬ್ಬರೂ ಸೇರಿ ಹಾಡ್ತೀರಲ್ಲಾ ಅದು ಹೇಗೆ ?

ಯುವಕ 1 : ನಮ್ಮ ತಂದೆನೂ.....

ಯುವಕ 2 : ನಮ್ಮ ತಂದೆನೂ ಹೇಳಿ ಕೊಟ್ರು, ನಾವು ಹಾಡ್ತೇವೆ.

ಯುವಕ 1 : ಇನ್ನೂ ಕೆಲವು ಹಾಡುಗಳಿವೆ ಹಾಡ್ಲಾ ?

ಯುವಕ 2 :

ತಮ್ಮ ತಾನು ಅಬಲನಾದರೆ
ಅಣ್ಣ ಕೊಂಚ ಸಬಲನಾದರೆ
ತುಳಿಯಬಹುದೇ ಕಿರಿಯನನ್ನು
ದರ್ಪದಲಿ ಆ ಹಿರಿಯನು.

ಯುವಕ 3 : ಏಯ್ ಸಾಕ್ರೋ ನಿಲ್ಸಿ ಹಾಡಿದ್ದು ಸಾಕು. ನಾನು ಪಕ್ಕದ ಅಂಗಡಿಗೆ ಹೋಗಿ ಮಿಠಾಯಿ ತಗೊತ್ತೀನೆ. ನೀನು ಬರ್ತೀಯಾ ?

ಯುವಕ 4 : ಆಟ ಆಡಿದ್ದು ಸಾಕು. ನಾನೂ ಇವನ ಜೊತೆ ಹೋಗ್ತೀನೆ,

(ಆಗ ಮುದುಕ ಬರುತ್ತಾನೆ)

ಮುದುಕ : ಏಯ್, ತಮ್ಮಂದಿರಾ ಎಲ್ಲಿಗೋಗ್ತಾ ಇದ್ದೀರಪ್ಪಾ ? ನೀವು ಹೋಗೋ ದಾರಿಯಲ್ಲಿ ಒಬ್ಬ ಪಟಾಕಿಯವನು ಬರ್‍ತಾ ಇದ್ದಾನೆ. ಅವನತ್ರ ಹೋಗ್ಬೇಡ್ರಪ್ಪಾ, ಅವನತ್ರ ಪಟಾಕಿನೂ ತಗೋಬೇಡಿ, ನೇರ ನಿಮ್ಮ ಮನೆಗೆ ಹೋಗಿ.

(ಆ ಇಬ್ಬರೂ ಯುವಕರು ಮುದುಕನ ಮಾತಿಗೆ ಕಿವಿ ಕೊಡುವುದಿಲ್ಲ)

## ದೃಶ್ಯ—2

[ಪ್ಯಾಂಟು, ಕೋಟು ಮತ್ತು ಹ್ಯಾಟ್ ಧರಿಸಿ ಬಗಲಲ್ಲಿ ಒಂದು ಚೀಲದೊಂದಿಗೆ ಪಟಾಕಿಯವನು ಬರುತ್ತಿದ್ದಾನೆ. ಯುವಕರಿಬ್ಬರೂ ಅವನ ಮುಂದ ನಿಲ್ಲುತ್ತಾರೆ].

ಪಟಾಕಿಯವನು : ಬನ್ನಿ....ಬನ್ನಿ ..... ನೋಡಿ .... ಚೆನ್ನಾಗಿ ನೋಡಿ ಬೇರೆಲ್ಲೂ ಸಿಗದ ವಿಧವಿಧವಾದ ಸಿಡಿಮದ್ದುಗಳು .... ಸಿಡೀ ಮದ್ದುಗಳು ಆಮೇಲೆ ಸಿಗೊಲ್ಲ. ಈಗಲೇ ತಗೊಳ್ಳಿ ಸಿಡಿಮದ್ದುಗಳು ಪಟಾಕಿ ಪಟಾಕಿ.....

ಯುವಕ 3 : ಇದು ಯಾವ ಪಟಾಕಿ ?

ಪಟಾಕಿಯವನು : ಇದಾ ? ಇದೇ ಕಣ್ ಚುಚ್ಚು ಪಟಾಕಿ ತಗೋ.... ಕಣ್ ಚುಚ್ಚೂSS

ಯುವಕ 4 : ಇದು ಯಾವ ಪಟಾಕಿ ?

ಪಟಾಕಿಯವನು : ಇದಾ ? ಇದೇ ವಿಷಹೊಗೆ ಈರುಳ್ಳಿ ಪಟಾಕಿ, ಹೊರದೇಶದ ಸಿಡಿಮದ್ದುಗಳು ನಮ್ಮವರು ಅಲ್ಲಿಂದ ರಫ್ತುಮಾಡಿರುವದು ನೀವೂ ಈ ಸಿಡಿಮದ್ದುಗಳನ್ನು ಸಿಡಿಸಿ ನೋಡಿ. ತಗೋ ಈ ರು ಳ್ಳಿ ಪ ಟಾ ಕಿ ಈSSರುಳ್ಳಿ.....

ಯುವಕ 4 : ಹೊರದೇಶದ ಸಿಡಿಮದ್ದುಗಳಾ ? ಅಬ್ಬಬ್ಬಾ.... ಒಂದೊಂದಕ್ಕೆ ಏನು ಬೆಲೆ ?

ಕೃಪೆ : ಚೆಮ್ಮಲರ್ (ತಮಿಳು)
ರಚನೆ : ಸಿ. ಕನಕಸಭಾಪತಿ
ಅನುವಾದ : ಅಚ್ಯುತ

ಪಟಾಕಿಯವನು : ದುಬಾರಿ ಬೆಲೆ ! ಆದರೆ ನೀವು ಈಗ ಹಣ ಕೊಡುವುದು ಬೇಡ. ನಾನು ಹೇಳುವ ಹಾಡನ್ನು ಕೇಳಿ ನೀವು ಹಾಡಿತೋರ್ಸಿ. ನೀವು ಹಾಡುವುದಾದರೆ ಪ್ರತಿದಿನವೂ ನಿಮಗೆ ಪಟಾಕಿಗಳನ್ನು ಕೊಡುತ್ತೇನೆ.

ಯುವಕ 3 : ಆಗಲಿ, ನಿಮ್ಮ ಹಾಡನ್ನು ಕೇಳಿ ಹಾಡ್ತೇವೆ. ಯಾವ ಹಾಡು ? ಹೇಳಿ. ಹೇಗೆ ಹಾಡ್ಬೇಕು ಹೇಳಿಕೊಡಿ.

ಯುವಕ 4 : ಹುಂ, ಸರಿ ನಾನೂ ಇವನೊಂದಿಗೆ ಸೇರಿ ಹಾಡ್ತೇನೆ.

(ಪಟಾಕಿಯವನು ಹಾಡುತ್ತಾನೆ.)

ಪಟಾಕಿಯವನು :

ಜಾತಿ ಜಾತಿ ಎತ್ತಿಕಟ್ಟಿ
ಕೋಮು ಕೋಮು ಬೇಧ ಬೆಳೆಸಿ
ನೀತಿ ನ್ಯಾಯ ಕೇಳಿದವರ ಎದುರೆ
ಸಿಡಿ ಮದ್ದು ಸಿಡಿಸಿ
ಶಿರಛ್ಛೇಧ ಮಾಡಿ ಮತ್ತೆ
ಮುಂದೆ ಮುಂದೆ ಸಾಗಿ
ಸಿಕ್ಕಿದಲ್ಲಿ ಬಾಂಬು ಸಿಡಿಸಿ
ನರಮೇಧ ಮಾಡಿ ||ಜಾತಿ||

(ಯುವಕರು ಅಭ್ಯಾಸ ಮಾಡುತ್ತಾರೆ)

ಯುವಕ 3 : ಈ ಹಾಡನ್ನು ಯಾರು ಹೇಳಿಕೊಟ್ರು ?

"ಪಟಾಕಿಯವನು" ನಾಟಕ 'ಚೆಮ್ಮಲರ್' ತಮಿಳು ಪತ್ರಿಕೆಯಲ್ಲಿ ಪ್ರಕಟವಾದ "ಪಟ್ಟಾಸ್‌ಕಾರನ್" ಎಂಬ ನಾಟಕದ ಅನುವಾದ. ಈ ನಾಟಕವನ್ನು ಸಿ. ಕನಕಸಭಾಪತಿ ಬರೆದಿದ್ದಾರೆ. ಕೆ.ಜಿ.ಎಫ್.ನ ಸಮುದಾಯ ತಮಿಳಿನಲ್ಲಿ ಮೊದಲ ಈ ನಾಟಕ ಪ್ರದರ್ಶನವನ್ನು ಮಾಡಿತು. ನಂತರ ಕನ್ನಡದ[...] ಪ್ರದರ್ಶಿಸಲಾಯಿತು. ನಾಟಕದ ಕೊ[...]ಯಲ್ಲಿ ಬರುವ ಹಾಡು ತಮಿ[...]ನಲ್ಲಿ ಸೌಂದರ್‌ರಾಜನ್ ಬರೆದಿದ್ದಾರ[...] ನಾಟಕವನ್ನು ಕನ್ನಡಕ್ಕೆ ಅಚ್ಯುತನ[...] ಭಾಷಾಂತರಿಸಿದ್ದಾರೆ.

ಪಟಾಕಿಯವನು : ಇಲ್ಲಿರುವ ಪಟಾಕಿಗಳೊಂದಿಗೆ ಹೊರದೇಶಗಳಿಂದ ಅಲ್ಲಿಯ ನಮ್ಮ ಪಟಾಕಿಯವರು ರಫ್ತು ಮಾಡಿರುವುದು.

ಯುವಕ 4 : ಈ ಹಾಡಿಗೆ ಏನು ಹೆಸರು ?

ಪಟಾಕಿಯವನು : ಸಿಡಿಮದ್ದಿನ ಹಾಡು.

ಯುವಕ 3 : ಈ ಪಟಾಕಿ ಹಾಡುಗಳನ್ನೂ, ಪಟಾಕಿಗಳನ್ನು ನಮಗೂ ಕೊಡುತ್ತೀರಾ ?

ಪಟಾಕಿಯವನು : ಹೌದು ಇದನ್ನು ನಿಮಗೆ ಕೊಡುತ್ತೇನೆ. ಇದನ್ನು ತಗೊಂಡು ಹೋಗಿ ನಿಮ್ಮ ಬೀದಿಯಲ್ಲೂ ಅಕ್ಕಪಕ್ಕದ ಬೀದಿಗಳಲ್ಲೂ, ಸಿಡಿಸಿ, ಪಟಾಕಿ ಹಾಡುಗಳನ್ನು ಹಾಡಿ ನಮ್ಮೊಂದಿಗೆ ಸೇರುವ ಪಟಾಕಿಯವರನ್ನು ಒಗ್ಗೂಡಿಸಿ. ಪಟಾಕಿ ಸಿಡಿಸಿದನ್ಯಾರೆಂದು ನಿಮ್ಮನ್ನು ಯಾರಾದ್ರೂ ಕೇಳಿದ್ರೆ ಓಡಿಹೋಗಿ ತಲೆಮರೆಸಿಕೊಳ್ಳಿ, ಮತ್ತೆ ಮುಖವಾಡ ಹಾಕಿಕೊಂಡು ಸಿಡಿಸಿ.

(ಪಟಾಕಿಯವನಿಂದ ಪಟಾಕಿಗಳನ್ನು ತಗೊಂಡು ಯುವಕರು ಹೊರಡುವಾಗ ಸ್ಥಬ್ದ. ಮುದುಕ ಪ್ರವೇಶಿಸುತ್ತಾನೆ.

ಮುದುಕ : ಜನ ನೋಡಿ ಪಟಾಕಿ ಸಿಡಿಸಿ ಅಂತ ಹೇಳ್ತಾನೆ. ಇವ್ನು ಇಲ್ಲಿ ವಿಷಹೊಗೆಯನ್ನು ಹರಡಲಿಕ್ಕೆ ಬಂದಿದ್ದಾನೆ.

## ದೃಶ್ಯ—3

[ಬೀದಿಯಲ್ಲಿ ಗುಂಡಿನ ಶಬ್ದ ಕೇಳುತ್ತದೆ. ಮುಖವಾಡ ಹಾಕಿದ ಇಬ್ಬರು ಮೆಲ್ಲಗೆ ಅವಿತು ಬರುತ್ತಿದ್ದಾರೆ. ಮುದುಕ ಅವರ ಮುಂದೆ ನಿಲ್ಲುತ್ತಾನೆ]

ಮುದುಕ : ಪಟಾಕಿಗಳ ಶಬ್ದ ಕೇಳುತ್ತಿದೆ ನನ್ನ ಕಿವಿ ಕಿವುಡಾಗುತ್ತಿದೆ ಪಟಾಕಿಯವನು ಕೊಟ್ಟ ಸಿಡಿಮದ್ದುಗಳನ್ನು ಸಿಡಿಸಿ ಇಲ್ಲಿ ಏನಾಗುವುದೋ ಗೊತ್ತಿಲ್ಲ. ಮುಖವಾಡ ಹಾಕಿಕೊಂಡ್ರೆ ಸಿಡಿಗುಂಡು ಸಿಡಿಸುವ ನೀವು ಯಾರಂತ ತಿಳಿಯೊಲ್ಲಾಂತ ಅಂದ್ಕೊಂಡ್ರಾ ? (ಮುಖವಾಡ ಹಾಕಿದ ಇಬ್ಬರು ಯುವಕರೂ ಅವಿತು ನಿಂತಿರುತ್ತಾರೆ. ಮುದುಕ ಅಲ್ಲಿಂದ ಹೊರಡುತ್ತಾನೆ. ಮಧ್ಯಮ ವಯಸ್ಸಿನ ತಂದೆಯಂದಿರಿಬ್ಬರು ಓಡಿ ಬ[...]ತ್ತಾರೆ.)

ತಂದೆ 1 : ಈ ಅನಾಚಾ[...] ಎಲ್ಲಾದ್ರೂ ಉಂಟೇ ? ಗಣೇಶನ ದೇ[...]ಸ್ಥಾನದ ಮುಂಭಾಗದಲ್ಲಿ ಯಾರೋ[...] ಒಬ್ಬ ವ್ಯಕ್ತಿಯನ್ನು ಹೊಡೆದು ಹಾ[...]ದ್ದಾರಂತೆ. ಆ ವ್ಯಕ್ತಿನೇ ಆ ಭಯಂಕ[...] ಸಿಡಿಮದ್ದುಗಳನ್ನು ಸಿಡಿಸಿದ್ದನಂ[...] ಹೇಳ್ತಾರೆ.

ತಂದೆ 2 : ಅವನು ಅಂತಹ ವ್ಯಕ್ತಿ[...]ಯಲ್ಲ. ಅವನು ನಮ್ಮ ಬೀದಿಯ[...] ದಿನಾ ಕಸಾ ಹೊಡೆಯಲಿಕ್ಕೆ ಬರೋ[...] ಪೌರ ಕಾರ್ಮಿಕ.

ತಂದೆ 1 : ಅವನು ಮುಸ್ಲಿಂ ಅಂ[...] ಬೇರೆ ಹೇಳ್ತಾರೆ. ಅವನನ್ನು ನೋಡಿದ್ರೆ[...] ಹಾಗೆ ಕಾಣ್ಸೊಲ್ಲ.

ತಂದೆ 2 : ಅವನು ಮುಸ್ಲಿಂ ಅಲ್ಲ[...] ಹೊಡೆದು ಹಾಕಿದ ಮೇಲೆ ಅವನ[...] ತಲೆ ಮೇಲೆ ಮುಸ್ಲಿಂ ಟೋಪಿ ಇಟ್ಟಿ[...]ದ್ದಾರೆ.

ತಂದೆ 1 : ಯಾರ್ಯಾರ ಮೇಲೋ[...] ಅಪಾದನೆ ಬರ್ಲಿಂತ ಹೀಗೆ ಮಾಡಿದ್ದಾ[...]ರಂತೆ ಕಾಣುತ್ತೆ.

ತಂದೆ 2 : ಒಬ್ಬ ಹರಿಜನ ವ್ಯಕ್ತಿ[...]ಯನ್ನು, ಯಾವುದೇ ತಂಟೆ ತಕರಾರಿ[...] ಹೋಗದವನನ್ನು ಹೀಗೆ ಅನ್ಯಾಯ[...]ವಾಗಿ ಹೊಡೆದು ಹಾಕಿ, ಅವ[...] ತಲೆಯ ಮೇಲೆ ಮುಸ್ಲಿಂ ಟೋಪಿ[...]ಯನ್ನು ಇಟ್ಟಿದ್ದಾರೆ ಪಾಪಿಗ[...] (ಆಗ ಅವರ ಮಕ್ಕಳಾದ ಇಬ್ಬರ[...] ಯುವಕರು ಕಣ್ಣುಗಳನ್ನು ಉಜ್ಜುತ್ತಾ[...] ಬರುತ್ತಾರೆ)

ಯುವಕ 1 : ಅಯ್ಯಯ್ಯಪ್ಪೋ[...] ನನ್ನ ಕಣ್ಣಿಗೆ ಸೂಜಿ ಚುಚ್ಚಿದಾ[...] ಆಗುತ್ತಿದೆಯೋ ಯಾವ್ನೋ ಪಟಾ[...] ಸಿಡಿಸಿದ್ನೋ....ನನ್ನ ಕಣ್ಣು ಹೊಯ್ತೊ[...] ....ಅಯ್ಯೋ....

ಯುವಕ 2 : ಅಯ್ಯಯ್ಯಮ್ಮೋ[...] ನನ್ನ ಕಣ್ಣುಗಳು ಉರಿದು ಕಣ್ಣೀರಾ[...]ಗ್ತಿದೆಯೋ ಯಾವ್ನೋ ಪಟಾಕಿ ಸಿಡಿ[...]ದ್ನೋ....ಅಯ್ಯೋ.....

ತಂದೆ 1 : ಹಾಂ ನೀವಾ, ಯಾರೋ[...] ಪಾಪಿಗಳು ಈ ಅನ್ಯಾಯ ಮಾಡಿ...

ತಂದೆ 2 : ಪಟಾಕಿ ಸಿಡಿಸಿದವರು ಯಾರು ? ಯಾವ ಕಡೆ ಹೋದ್ರು ಯಾವ ಕಡೆ....

(ಮುಂದಿನ ಪುಟಕ್ಕೆ)

### ಓ ನನ್ನ ಸೋದರರೆ,

# ನಮ್ಮ ವಿಮೋಚನೆಯ ದಾರಿ ಇಲ್ಲಿದೆ

**-ಹೋಚಿಮಿನ್**

ಮೊದಲನೆಯ ಯುದ್ಧದ ನಂತರ ನಾನು ಒಮ್ಮೆ ಪ್ಯಾರೀಸ್‌ನಲ್ಲಿ ಒಂದು ಫೋಟೋ ಸ್ಟುಡಿಯೋದಲ್ಲಿ ಮತ್ತೊಮ್ಮೆ ಪ್ರಾನ್ಸ್‌ನಲ್ಲಿ (!) ಚೀನಿ ಪುರಾತನ ವಸ್ತುಗಳನ್ನು ತಯಾರಿಸುವಲ್ಲಿ ಚಿತ್ರಗಾರನಾಗಿ ಕೆಲಸ ಮಾಡುತ್ತಿದ್ದೆ. ವಿಯೆಟ್ನಾಂನ ಫ್ರೆಂಚ್ ವಸಾಹತು ಶಾಹಿಗಳನ್ನು ಖಂಡಿಸುವ ಕರ ಪತ್ರಗಳನ್ನು ಹಂಚುತ್ತಿದ್ದೆ.

ಆಗ ಅಕ್ಟೋಬರ್ ಕ್ರಾಂತಿಯ ಐತಿಹಾಸಿಕ ಪ್ರಾಮುಖ್ಯತೆಯ ಬಗ್ಗೆ ನನಗಿನ್ನೂ ಏನೂ ತಿಳಿದಿರದಿದ್ದರೂ ಕೇವಲ ಭಾವನಾತ್ಮಕವಾಗಿ ಆ ಕ್ರಾಂತಿಗೆ ಬೆಂಬಲ ಲಸೂಚಿಸಿದ್ದೆ. ಲೆನಿನ್‌ರವರನ್ನು ತಮ್ಮ ದೇಶದ ಸೋದರರನ್ನು ವಿಮೋಚನೆಗೊಳಿಸಿದ ಒಬ್ಬ ದೊಡ್ಡ ದೇಶಾಭಿಮಾನಿ ಎಂದು ಪ್ರೀತಿಸಿದ್ದೆ, ಮೆಚ್ಚಿದ್ದೆ. ಅವರ ಯಾವ ಪುಸ್ತಕಗಳನ್ನೂ ಓದಿರಲಿಲ್ಲ.

ಫ್ರೆಂಚ್ ಸೋಷಿಯಲಿಸ್ಟ್ ಪಾರ್ಟಿಗೆ ಸೇರಿದ "ಮಹನೀಯರು ಮಹಿಳೆಯರು" (ನಾನು ಆಗ ಅವರನ್ನು ಈ ರೀತಿ ಕರೆಯುತ್ತಿದ್ದೆ) ನನ್ನ ಬಗ್ಗೆ, ಶೋಷಿತ ಜನಾಂಗಗಳ ಹೋರಾಟದ ಬಗ್ಗೆ ಅನುಕಂಪ ತೋರಿಸುತ್ತಿದ್ದುದರಿಂದ ನಾನು ಆ ಪಾರ್ಟಿಗೆ ಸೇರಿದೆ. ಆದರೆ ನನಗೆ ಪಕ್ಷ ಎಂದರೇನು? ಕಾರ್ಮಿಕ ಸಂಘ ಎಂದರೇನು? ಸಮಾಜವಾದ ಅಥವಾ ಸಮತಾವಾದ ಎಂದರೇನು ಎಂದು ತಿಳಿದಿರಲಿಲ್ಲ.

ಆಗ ಸೋಷಿಯಲಿಸ್ಟ್ ಪಕ್ಷದ ಶಾಖೆಗಳಲ್ಲಿ ಪಕ್ಷ ಎಕಡನೇ ಇಂಟರ್‌ನ್ಯಾಷನಲ್‌ನಲ್ಲಿ ಸೇರಬೇಕೋ? ಎರಡೂವರೆ ಇಂಟರ್ ನ್ಯಾಷನಲ್ ಒಂದನ್ನು ಆರಂಭಿಸಬೇಕೋ? ಲೆನಿನ್‌ರವರ ಮೂರನೇ ಇಂಟರ್‌ನ್ಯಾಷನಲ್ ಅನ್ನು ಸೇರಬೇಕೊ ಎಂಬ ಬಗ್ಗೆ ಕಾವೇರಿದ ಚರ್ಚೆಗಳು ನಡೆಯುತ್ತಿದ್ದವು. ವಾರಕ್ಕೆ ಎರಡು ಮೂರು ಭಾರಿ ನಾನು ಈ ಸಭೆಗಳಲ್ಲಿ ಭಾಗವಹಿಸುತ್ತಿದ್ದೆ ಮತ್ತು ಚರ್ಚೆಯನ್ನು ಕಿವಿಗೊಟ್ಟು ಕೇಳುತ್ತಿದ್ದೆ. ಮೊದಮೊದಲು ನನಗೆ ಇನ್ಯಾವುದನ್ನೂ ಅರ್ಥಮಾಡಿಕೊಳ್ಳಲಾಗಲಿಲ್ಲ ಏಕೆ ಈ ಚರ್ಚೆಗಳಲ್ಲಿ ಇಷ್ಟೊಂದು ಉದ್ವೇಗ? ಎರಡನೆಯ, ಎರಡೂವರೆ ಅಥವಾ ಮೂರನೆಯ ಇಂಟರ್ ನ್ಯಾಷನಲ್ ಗಳಲ್ಲಿ ಯಾವುದಾದರೇನು? ಕ್ರಾಂತಿ ಮಾಡಬಹುದಲ್ಲ? ಅದರ ಬಗ್ಗೆ ಗುದ್ದಾಡಿ ಪ್ರಯೋಜನವೇನು? ಮೊದಲನೆ ಇಂಟರ್‌ನ್ಯಾಷನಲ್ ಎಂಬುದೊಂದು ಇತ್ತೆ? ಅದಕ್ಕೆ ಏನಾಯಿತು? ಇನ್ಯಾವುದೂ ನನಗೆ ತಿಳಿಯುತ್ತಿರಲಿಲ್ಲ.

ಆದರೆ ನನಗೆ ತಿಳಿಯ ಬೇಕಾದ ಅತ್ಯಂತ್ಯ ಅವಶ್ಯ ಸಂಗತಿಯೆಂದರೆ ಈ ಇಂಟರ್‌ನ್ಯಾಷನಲ್‌ಗಳಲ್ಲಿ ಯಾವುದು ವಸಾಹತು ಶಾಹಿಯಿಂದ ಪೀಡಿತವಾದ ಜನರ ಪರವಾಗಿದೆ ಎಂಬುದು ಇದು ಆ ಚರ್ಚೆಗಳಲ್ಲಿ ಬರುತ್ತಲೇ ಇರಲಿಲ್ಲ.

ನಾನು ಈ ಪ್ರಶ್ನೆಯನ್ನು ನನ್ನ ಪ್ರಕಾರ ಅತಿ ಮುಖ್ಯವಾದ ಪ್ರಶ್ನೆಯನ್ನು ಈ ಸಭೆಯಲ್ಲಿ ಎತ್ತಿದೆ. ಕೆಲವು ಸಂಗಾತಿಗಳು ನಿಮಗೆ ಸಹಾಯ ಮಾಡವುದು ಮೂರನೇ ಇಂಟರ್ ನ್ಯಾಷನಲ್ ಎರಡನೆಯದಲ್ಲ ಎಂದು ಉತ್ತರಿಸಿದರು. ಅದರಲ್ಲಿ ಒಬ್ಬರು ಲೆನಿನ್‌ರವರ "ರಾಷ್ಟ್ರೀಯ ಹಾಗೂ ವಸಾಹತು ಪ್ರಶ್ನೆಗಳ ಬಗ್ಗೆ ಒಂದು ವಿಚಾರ" (ಥೀಸಿಸ್) ಎನ್ನುವ ಪುಸ್ತಕವನ್ನೂ ನೀಡಿದರು.

ಈ ಪುಸ್ತಕದಲ್ಲಿ ನನಗೆ ಅರ್ಥವಾಗದ ಅನೇಕ ಪದಗಳು ಇದ್ದವು. ಆದರೆ ನಾನು ಬಿಡದೆ ಮತ್ತೆ ಮತ್ತೆ ಓದಿದುದರಿಂದ ಅದರ ಮುಖ್ಯ ಸಾರಾಂಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ಓಹ್! ಎಂತಹ ಉತ್ಸಾಹ ಉದ್ವೇಗ, ಸ್ಪಷ್ಟ ತಿಳುವಳಿಕೆ ಹಾಗೂ ಆತ್ಮ ವಿಶ್ವಾಸವನ್ನು ಅದು ಮೂಡಿಸಿತು! ಸಂತೋಷದಿಂದ ಕಣ್ಣೀರು ದಳದಳನೇ ಸುರಿಯಿತು: ನನ್ನ ಕೊಠಡಿಯಲ್ಲಿ ಒಬ್ಬನೇ ಕುಳಿತಿದ್ದರೂ, ದೊಡ್ಡ ಜನಸಂದಣಿಯೇ ನನ್ನ ಮುಂದೆ ನೆರೆದಿದೆ, ನಾನು ಅದನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದೇನೆ ಎನ್ನುವಂತೆ ಗಟ್ಟಿಯಾಗಿ ಕೂಗಿದೆ:

"ಆತ್ಮೀಯ ಸೋದರರೆ, ಮರಣವನ್ನಪ್ಪಲು ಸಿದ್ಧವಾದವರೆ, ನಮಗೆ ಬೇಕಾದದ್ದು ಇಲ್ಲಿದೆ. ಇದೇ ನಮ್ಮ ವಿಮೋಚನೆಯ ದಾರಿ."

ಮೊದಲು ಪಕ್ಷದ ಚರ್ಚೆಗಳಲ್ಲಿ ಕೇವಲ ಆಲಿಸುತ್ತಾ ಕುಳಿತಿರುತ್ತಿದ್ದ ನಾನು, ನಂತರ ಚರ್ಚೆಗಳಲ್ಲಿ ಧುಮುಕಿದೆ, ಉದ್ವೇಗದಿಂದ ಮಾತನಾಡುತ್ತಿದ್ದೆ, ಲೆನಿನ್‌ರವರ ವಿರುದ್ಧ, ಮೂರನೇ ಇಂಟರ್ ನ್ಯಾಷನಲ್ ವಿರುದ್ಧದ ಅಪಾದನೆಗಳನ್ನು ಪುಡಿ ಪುಡಿ ಮಾಡುತ್ತಿದ್ದೆ.

ನನ್ನ ಒಂದೇ ವಾದವೆಂದರೆ ನೀವು ವಸಾಹತುವಾದವನ್ನು ಖಂಡಿಸದಿದ್ದರೆ, ವಸಾಹತುಗಳ ಜನರ ಪರ ವಹಿಸದಿದ್ದರೆ, ಮತ್ತಿನ್ನೆಂತಹ ಕ್ರಾಂತಿಯನ್ನು ಮಾಡ ಬಯಸುತ್ತೀರಿ? ಎಂದು.

ಮೊದಮೊದಲು ಕೇವಲದೇಶಪ್ರೇಮ ಮಾತ್ರ, ಕಮ್ಯುನಿಸಂ ಅಲ್ಲ ನಾವು ಲೆನಿನ್‌ರವರಲ್ಲಿ ನೆಚ್ಚಿಕೆಯಿಡುವಂತೆ ಮಾಡಿದ್ದು. ನಂತರ ಹಂತ ಹಂತವಾಗಿ ಹೋರಾಟದ ದಾರಿಯಲ್ಲಿ ಮಾರ್ಕ್ಸ್‌ವಾದ ಲೆನಿನ್ ವಾದವನ್ನು ಅಭ್ಯಾಸ ಮಾಡಿದೆ.

ವಿಯೆಟ್ನಾಂನಲ್ಲಿ ಕ್ರಾಂತಿಯನ್ನು ನಡಿಸಿದ್ದು ಮಾತ್ರವೇ ಅಲ್ಲ, ದೈತ್ಯ ಶಕ್ತಿಯ ಅಮೇರಿಕಾದ ವಿರುದ್ಧ ಧೀರ ಹೋರಾಟಕ್ಕೆ ನೇತೃತ್ವ ನೀಡುತ್ತಲೇ ಮಡಿದ ಮಹಾನ್ ನಾಯಕ ಹೋಚಿಮಿನ್.

## ಅಣು ಯುದ್ಧದ ವಿರುದ್ಧ ಸಮುದಾಯದ ಜಾತಾ

ಶಿವಮೊಗ್ಗಾ : ವಿಶ್ವಶಾಂತಿ ಕಾರ್ಯಕ್ರಮದ ಅಂಗವಾಗಿ ಸಮುದಾಯ ಸೆಪ್ಟೆಂಬರ್ ತಿಂಗಳ ಮೊದಲ ವಾರದಿಂದ ರಾಜ್ಯಾದ್ಯಾಂತ ಸಾಂಸ್ಕೃತಿಕ ಜಾಥಾ ಕಾರ್ಯಕ್ರಮ ಹಾಕಿಕೊಂಡಿದೆ.

ಸಮುದಾಯದ ಕೇಂದ್ರ ಸಮಿತಿ ಇತ್ತೀಚಿಗೆ ಸಭೆ ಸೇರಿ ಅಣುಸಮರದ ವಿರುದ್ಧ ಜಾಥಾದಕಾರ್ಯಕ್ರಮ ರೂಪಿಸಿದೆ ಜಾಥಾದಲ್ಲಿ ಸಮುದಾಯದ ಕಲಾವಿದರು ಭಾಗವಹಿಸಲಿದ್ದು ಯುದ್ಧ ವಿರೋಧಿ ಹಾಡುಗಳು ಹಾಗೂ ನಾಟಕ ಪ್ರದರ್ಶನ ನಡೆಯಲಿದೆ.

ಅಣುಸಮರದ ಬಗ್ಗೆ ಚಿತ್ರಿತವಾಗಿರುವ ನೂರು ಅತಿ ಗಾತ್ರದ ಭಿತ್ತಿ ಚಿತ್ರವನ್ನು ಈ ಜಾಥಾಕ್ಕಾಗಿಯೇ ವಿಶೇಷವಾಗಿ ನಿರ್ಮಿಸಲಾಗಿದ್ದು, ಜಾಥಾ ತಂಗುವ ಸ್ಥಳಗಳಲ್ಲಿ ಇದರ ಪ್ರದರ್ಶನಕ್ಕೆ ಏರ್ಪಾಟು ಮಾಡಲಾಗಿದೆ. ಇಷ್ಟು ದೊಡ್ಡ ಗಾತ್ರದ ಭಿತ್ತಿ ಚಿತ್ರ ಪ್ರದರ್ಶನ ಅಪರೂಪದ್ದೆನಿಸಿದ್ದು. ಇದು ಜನಾಕರ್ಷಣೀಯವಾಗಲಿದೆ

ಸೆಪ್ಟೆಂಬರ್ 26 ಮತ್ತು 27 ರಂದು ಜಾಥಾ ಶಿವಮೊಗ್ಗಕ್ಕೆ ಬರುವ ನಿರೀಕ್ಷೆ ಇದ್ದು ಈ ಬಗ್ಗೆ ಕಾರ್ಯಕ್ರಮ ರೂಪಿಸಲು ಕಳೆದ ಭಾನುವಾರ ತಾ 17 ರಂದು ನಗರದಲ್ಲಿ ಕಾರ್ಯಾಗಾರವೊಂದನ್ನು ನಡೆಸಲಾಯಿತು.

ಕಾರ್ಯಾಗಾರದಲ್ಲಿ ಜಿಲ್ಲೆಯ ವಿವಿಧ ಕಡೆಯಿಂದ ಸಮುದಾಯ ಕಾರ್ಯಕರ್ತರು ಆಗಮಿಸಿದ್ದು, ಸಮುದಾಯದ ಕೇಂದ್ರ ಸಮಿತಿ ಸದಸ್ಯ ಜನಾರ್ಧನ್ ಕಾರ್ಯಾಗಾರದಲ್ಲಿ ಹಾಜರಿದ್ದು, ಮಾರ್ಗದರ್ಶನ ಮಾಡಿದರು. ಸರ್ವಶ್ರಿ ವಿಲಿಯಂ ಕಾರ್ಯಾಗಾರ ಯಶಸ್ವಿಯಾಗುವಂತೆ ನೋಡಿಕೊಂಡರು.

---

ತಂದೆ 1 : ಬನ್ನಿ ಬೇಗ ಮನೆಗೆ ಹೋಗೋಣ. ಇನ್ನೂ ಇಲ್ಲೇ ನಿಂತ್ರೆ ನಮಗೆ ಆಪತ್ತು. ಬನ್ನಿ....

ತಂದೆ 2 : ಹೌದು ... ನಮ್ಮ ಕೈಗಳನ್ನು ಹಿಡಿದುಕೊಳ್ಳಿ. ಮನೆಗೆ ಹೋಗೋಣ. ಆದೇನಾಗುತ್ತೊ ಆ ಮೇಲೆ ನೋಡೋಣ.

(ಯುವಕರಿಬ್ಬರೂ ಒಂದು ಕೈಯಿಂದ ಕಣ್ಣು ಉಜ್ಜುತ್ತಾ ಇನ್ನೊಂದು ಕೈಯಿಂದ ತಂದೆಯಂದಿರ ಕೈಹಿಡಿದು ಕೊಂಡು ಹೋಗುತ್ತಾರೆ.)

ದೃಶ್ಯ-4

[ಮುಖವಾಡ ಧರಿಸಿದ ಇಬ್ಬರು ಯುವಕರು ಬೀದಿಯಲ್ಲಿ ಹಾಡುವುದು ಕೇಳುತ್ತೆ.]

ಯುವಕ 4 : ಜಾತಿ ಜಾತಿ ಎತ್ತಿಕಟ್ಟಿ

3 : ... ...........

(ಆಗ ಗಣೇಶನ ದೇವಸ್ಥಾನದ ಮುಂದೆ ಏಟು ಬಿದ್ದವನು ಮೆಲ್ಲನೆ ಎದ್ದು ಬರುತ್ತಾನೆ. ಆ ಯುವಕರ ಮುಖವಾಡಗಳನ್ನು ಕಿತ್ತು ಬಿಸಾಕಿ ಆಶ್ಚರ್ಯ ಪಡುತ್ತಾನೆ.)

ಕಾರ್ಮಿಕ : ಅರೇ ನೀವಾ? ನೀವೇನಾ ನಾ ಸಿಡಿಗುಂಡು ಸಿಡಿಸಿದ್ದು. ಆ ಪಟಾಕಿಯವನಿಂದ ತಾನೇ ನೀವು ಸಿಡಿಮದ್ದುಗಳನ್ನು ಕೊಂಡಿರಿ? ಹಾಡು ಬೇರೆ ಹಾಡ್ತಿರಾ? ಅಪಾದನೆಯನ್ನು ಯಾರ್‍ಯಾರ ಮೇಲೋ ಹೇರೋಕೆ ನೋಡ್ತಿದ್ದಿರಾ. ನಾನು ಒಬ್ಬನೇ ಇರುವಾಗ ನನ್ನನ್ನು ಹೊಡೆದು ಹಾಕಿನ್ರಲ್ಲಾ? ನಾವು ಯಾರೂಂತ ತಿಳಿಸ್ತೀವೆ.

(ಮುಷ್ಟಿ ಮೇಲಕ್ಕೆತ್ತುತ್ತಾನೆ. ಕಾರ್ಮಿಕನ ಹಿಂದೆ ದೊಡ್ಡದೊಂದು ಕಾರ್ಮಿಕರ ಗುಂಪು. ಆ ಯುವಕರನ್ನು ಓಡಿಸಿ ಸ್ಥಬ್ಧ.)

ಮುದುಕ : ಆ ಪಟಾಕಿಯವನ ಚೀಲದಲ್ಲಿದ್ದ ಸಿಡಿಮದ್ದುಗಳೇ ಇದಕ್ಕೆಲ್ಲ ಕಾರಣ. ಕೆಲವರಿಗೆ ಅವನ ವಿಷಯ ತಿಳಿದಿದೆ. ಅವನನ್ನು ಹಿಡಿಲಿಕ್ಕಂತ ಹೋಗಿದ್ದಾರೆ. ಬಗಲಲ್ಲಿದ್ದ ಚೀಲವನ್ನು ಅಲ್ಲೇ ಬಿಸಾಕಿ ಅವನು ಓಡಿ ಹೋದ. ಪಟ್ಟಣದ ಒಂದು ದೊಡ್ಡ ಹೊಟೆಲಿಗೆ ಹೋಗಿ ಅವನು ಫೋನ್ ಮಾಡಿದ್ದಾನೆ. ಆ ಹೊಟೇಲಿನಲ್ಲಿದ್ದ ಪಟಾಕಿಯವರನ್ನು ಸೇರಿಸಿಕೊಂಡು ವಿಮಾನ ನಿಲ್ದಾಣಕ್ಕೆ ಓಡಿ ಹೋಗಿದ್ದಾನೆ. ಆದರೆ ಇಲ್ಲಿ ನೋಡಿ ಅವನ ಚೀಲವಲ್ಲಿದ್ದ ಪಾಸ್ ಪೋರ್ಟ್. ಅವನ ಫೋಟೋ ಇಲ್ಲಿದೆ ನೋಡಿ.

ಕಾರ್ಮಿಕರು : ಹಾಡು.

ನ್ಯೂಟ್ರಾನ್ ನಾಲಗೆ ಹೆಡ್ರೋಜನ್
ಹಲ್ಲಿನ
ನಾಯಿಯು ಒಂದು ಅಲೆಯುತಿದೇ
ಹುಚ್ಚು
ನಾಯಿಯು ಒಂದು ಅಲೆಯುತಿದೆ.

ಹಿಂದೂ ಸಾಗರದೊಡಲಿನಲೀ
ಅದು ಕಕ್ಕಿದೆ ಹಾಲಾಹಲ ವಿಷವ
ನಮ್ಮ ಎಲ್ಲೆ ಪ್ರದೇಶದ ರಾಜ್ಯಗಳಲ್ಲಿ
ಮೂಳೆಯು ಕಚ್ಚಿ ತಿರುಗುತಿಹೆ.

ಟ್ರಿಂಕೋಮಲೆಯ ದೇಹದಲಿ
ಡಿಯಾಗೊ ಗಾರ್ಸಿಯ ದ್ವೀಪದ
ಅದು ಅವಿತು ಕಚ್ಚಿದ ಗಾಯದಲಿ
ಕೋಮುಗಲಭೆಗಳು ಸಿಡಿಯುತಿವೆ.

ಮಾನವ ಹೂಗಳ ಶಾಂತಿವನವಿದು
ನಾಟ್ಯವಾಡಲಿ ನವಿಲುಗಳು
ಇದು ಹಾಳು ಗೆಡಹುವ ಹುಚ್ಚು
ನಾಯಿಯ

ಚಚ್ಚಿ ಹೂಳಿರಿ ಗೋರಿಯಲ್ಲಿ
ಶಾಂತಿ ಕಹಳೆಯು ಮೊಳಗಲಿ.
ವಿಶ್ವಶಾಂತಿ—ಚಿರಾಯುವಾಗಲಿ

## ಬೀಡಿ ಕಾರ್ಮಿಕರ ಪ್ರತಿಭಟನಾ ಪ್ರದರ್ಶನ

ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನಿನ ಕರೆಯಂತೆ 14-8-86 ರಂದು ಮೂಡುಬಿದ್ರಿಯಲ್ಲಿ ಸಿ.ಐ.ಟಿ.ಯು. ನೇತೃತ್ವದ ಬೀಡಿ ಕಾರ್ಮಿಕರ ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು. ಮೂಡುಬಿದ್ರಿಯ ವಿವಿಧ ಪ್ರದೇಶಗಳಿಂದ ಬಂದ ಬೀಡಿ ಕಾರ್ಮಿಕರು ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಹೋಗಿ ತಮ್ಮ ಬೇಡಿಕೆಗಳಿರುವ ಮನವಿಯನ್ನು ಜೆ. ಬಾಲಕೃಷ್ಣ ಶೆಟ್ಟಿ ಕುಮಾರಿ ರಮಣಿಯವರ ನೇತೃತ್ವದಲ್ಲಿ ಬೀಡಿ ಉದ್ಯೋಗಗಳ ವ್ಯವಸ್ಥಾಪಕರಿಗೆ ಸಲ್ಲಿಸಿದರು. ಬಳಿಕ ನಡೆದ ಸಭೆಯಲ್ಲಿ ಫೆಡರೇಶನಿನ ಜೊತೆ ಕಾರ್ಯದರ್ಶಿ ಜೆ ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ಕನಿಷ್ಟ ಮಜೂರಿಯಲ್ಲಿ ರಾಜ್ಯ ಸರಕಾರ ಲಕ್ಷಾಂತರ ಬೀಡಿ ಕಾರ್ಮಿಕರಿಗೆ ಮಾಡಿದ ಅನ್ಯಾಯವನ್ನು ಖಂಡಿಸುತ್ತಾ ಬೀಡಿ ಕಾರ್ಮಿಕರಿಗೆ ವಾರದಲ್ಲಿ 6 ದಿನ ಭರ್ತಿ ಕೆಲಸ ಕೊಡಬೇಕು. ಸಲಹಾ ಸಮಿತಿಯ ಸಲಹೆಯಂತೆ ಸಾವಿರ ಬೀಡಿಕಟ್ಟಿದ್ದಕ್ಕೆ 12ರೂಪಾಯಿ ಕನಿಷ್ಟ ಮಜೂರಿ, 470 ಪಾಯಿಂಟ್ ಆಧಾರವಾಗಿ ಏರಿದ ಪ್ರತಿ ಒಂದು ಪಾಯಿಂಟಿಗೆ 3ಪೈಸೆಯಂತೆ ಸರಕಾರ ನಿಗದಿ ಮಾಡಬೇಕೆಂದು ಒತ್ತಾಯಿಸಿದರು. ಸರಕಾರ ಕಾರ್ಮಿಕ ವಿರೋಧಿ ನೀತಿ ಮುಂದುವರಿಸಿದಲ್ಲಿ ಕಾರ್ಮಿಕರು ಬಿಸಿಗಳಿಯಬೇಕಾದಿತೆಂದುಎಚ್ಚರಿಸಿದರು

## ವಿಶ್ವ ಶಾಂತಿ ದಿನಾಚರಣೆ

ಯುದ್ಧಖೋರರ ಮೇಲೆ ಶಾಂತಿಯನ್ನು ಹೇರಲು ಜಗತ್ತಿನಾದ್ಯಂತ ಪ್ರಬಲವಾದ ಚಳವಳಿ ನಡೆಯುತ್ತಿದ್ದು ಈ ಚಳುವಳಿಯ ಅಂಗವಾಗಿ ಜಗತ್ತಿನಾದ್ಯಂತ ಕಾರ್ಮಿಕ ವರ್ಗವು ಸೆಪ್ಟೆಂಬರ್ ಒಂದರಂದು ವಿಶ್ವಶಾಂತಿ ದಿನಾಚರಣೆ ಆಚರಿಸಬೇಕೆಂದು ದೇಶದ ಕಾರ್ಮಿಕ ಸಂಘಗಳ ಫೆಡರೇಶನ್ ನೀಡಿದ ಕರೆಯಂತೆ ಬಂಟ್ವಾಳದಲ್ಲಿ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಬಿ. ಹೂವಯ್ಯ ಬಂಗೇರರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು,

ಆರಂಭದಲ್ಲಿ ಬಿ. ಎ. ಗೋಪಾಲ ಗೌಡರು ಸಾಗತ ಭಾಷಣ ಮಾಡಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಪಿ.ಐ. (ಎಂ.) ನ ಕಾರ್ಯದರ್ಶಿ ಬಿ. ವಾಸುಗಟ್ಟಿಯವರು ಈ ಶತಮಾನದ ಅಂತ್ಯದೊಳಗೆ ಎಲ್ಲಾ ಪರಮಾಣು ಶಸ್ತ್ರಗಳನ್ನು ನಾಶಮಾಡಲು ಮತ್ತು ಜಗತ್ತನ್ನು ಸರ್ವನಾಶದಿಂದ ರಕ್ಷಿಸಲು ಸಮಾಜವಾದೀ ಸೋವಿಯತ್ ದೇಶವು ಮುಂದಿಟ್ಟ ರಚನಾತ್ಮಕ ಸೂಚನೆಗಳನ್ನು ಸ್ವೀಕರಿಸಲು ನಿರಾಕರಿಸುವ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಲೋಕ ಶಾಂತಿಯ ಪರಮ ಶತ್ರುಗಳಾಗಿದ್ದಾರೆ ಎಂದು ಅಪಾದಿಸಿದರು.

ಅಮೇರಿಕನ್ ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯಿಂದಾಗಿ ಜಗತ್ತು ಇಂದು ಪರಮಾಣು ಯುದ್ಧದ ಗಂಭೀರ ಅಪಾಯನ್ನು ಎದುರಿಸುತ್ತಿದೆ. ಪ್ರಪಂಚದ ಹಲವು ಭಾಗಗಳಲ್ಲಿ ಸೈನಿಕ ನೆಲೆಗಳನ್ನು, ಕ್ಷಿಪಣಿಗಳನ್ನೂ, ಸ್ಥಾಪಿಸಿ, ಭಾರಿ ಪ್ರಮಾಣದ ಮಾರಕಾಸ್ತ್ರಗಳನ್ನು ಸಂಗ್ರಹಿಸಿಟ್ಟು, ಇದೀಗ ತಾರಾಯುದ್ಧದ ಯೋಜನೆಯ ಮೂಲಕ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಬಾಹ್ಯಾಕಾಶವನ್ನು ಮಿಲಿಟರೀಕರಣಗೊಳಿಸುತ್ತಿದ್ದಾರೆ. ಎಂದು ಎಚ್ಚರಿಸಿದರು.

# ಕರ್ನಾಟಕವು ವಾಸ್ತವವಾದ ಸ್ವಾತಂತ್ರ್ಯದತ್ತ ಮುನ್ನಡೆಯುತ್ತಿದೆ.

ಸ್ವಾತಂತ್ರ್ಯೋತ್ಸವವನ್ನು ಆಚರಿಸುವದೆಂದರೆ ನಮಗೆ ಸಹಜವಾಗಿಯೇ ಹೆಮ್ಮೆ. ನಮ್ಮ ಭಾರತ ದೇಶದ ಮಹಾನ್ ಜನತೆಯ ಪುನರ್ಜನ್ಮದ ಸಂಕೇತ ಈ ಸ್ವಾತಂತ್ರ್ಯ ದಿನ.

ಸ್ವಾತಂತ್ರ್ಯದ ನಿಜವಾದ ಚೈತನ್ಯವನ್ನು ಎತ್ತಿ ಹಿಡಿಯುವಲ್ಲಿ ಕರ್ನಾಟಕ ನಿಜಕ್ಕೂ ಮೇಲುಗೈಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಿ ನೋಡಿದರೆ ಸಾಕು, ಈ ಅಂಶ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ.

**ಗ್ರಾಮೀಣ ಕುಡಿಯುವ ನೀರು ಪೂರೈಕೆ :**

ಭಾರತದ ಯೋಜನಾ ಆಯೋಗದ ಸಮೀಕ್ಷೆಯ ಪ್ರಕಾರ ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಯನ್ವಯ 1984-85ರಲ್ಲಿ ನಮ್ಮ ರಾಜ್ಯ ಇಡೀ ದೇಶದಲ್ಲೇ ಪ್ರಥಮ ಸ್ಥಾನದಲ್ಲಿತ್ತು. ಕಳೆದ ಮೂರು ವರ್ಷ 49320 ಕೊಳವೆ ಬಾವಿಗಳನ್ನು ತೋಡಲಾಗಿದೆ.

ಈ ಸಾಧನೆಯ ಸಂಬಂಧ ಗಮನಿಸಬೇಕಾದ ಸಂಗತಿಯೆಂದರೆ ಭಾರತ ದೇಶಾದ್ಯಂತ ಸುಮಾರು 6 ಲಕ್ಷ ಕೊಳವೆ ಭಾವಿಗಳಿದ್ದು, ಅವುಗಳಲ್ಲಿ 1.6 ರಷ್ಟು ಭಾವಿಗಳು ಅಂದರೆ ಒಂದು ಲಕ್ಷಕ್ಕೂ ಮೀರಿದ ಕೊಳವೆ ಬಾವಿಗಳು ಕರ್ನಾಟಕದಲ್ಲಿಯೇ ಇವೆ.

**ಜೀತ ಮುಕ್ತರಿಗೆ ಪುನರ್ವಸತಿ :**

ಜೀತ ಪದ್ಧತಿಯ ನಿರ್ಮೂಲನದಿಂದ ರಾಜ್ಯದಲ್ಲಿ 62,689 ಮಂದಿ ಜೀತದಾಳುಗಳು ಬಿಡುಗಡೆ ಹೊಂದಿದರು, ಇವರಲ್ಲಿ 1985-86ರ ಅಂತ್ಯದ ವೇಳೆಗೆ 30129 ಮಂದಿಗೆ ಪುನರ್ವಸತಿ ಕಲ್ಪಿಸಲಾಗಿದೆ.

**ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರ :**

ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಒಂದು ಮತ್ತು ಎರಡನೇ ತರಗತಿಯ ಮಕ್ಕಳಿಗೆ ಉಚಿತ ಸಮವಸ್ತ್ರ ವಿತರಣೆ ಮಾಡಲಾಗುತ್ತಿದೆ. ಈ ಯೋಜನೆಯಿಂದ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯೋಜನ ಹೊಂದಿದ್ದಾರೆ.

**ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕಗಳ ವಿತರಣೆ :**

ಸರ್ಕಾರ ಕಾರ್ಯರೂಪಕ್ಕೆ ತಂದಿರುವ ಇನ್ನೊಂದು ಕ್ರಾಂತಿಕಾರಿ ಕಾರ್ಯಕ್ರಮ. ಇದರಿಂದ ಸರ್ಕಾರಿ ಶಾಲೆಯ ಒಂದರಿಂದ ನಾಲ್ಕನೇ ತರಗತಿವರೆಗಿನ ಸುಮಾರು 53 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕಗಳನ್ನು ನೀಡಲಾಗಿದೆ.

**ಅನಾಥ ವಿಧವೆಯರಿಗೆ ಮಾಸಾಶನ :**

ರೂ. 1500 ಕ್ಕಿಂತ ಕಡಿಮೆ ವರಮಾನವಿರುವ ವಿಧವೆಯರಿಗೆ 50-00 ರೂ. ಮಾಸಾಶನ ನೀಡಿಕೆ. 1985-86ರಲ್ಲಿ ಈ ಪ್ರಯೋಜನ ಪಡೆದವರ ಸಂಖ್ಯೆ ಸುಮಾರು 3 ಲಕ್ಷ.

**ಹೆರಿಗೆ ಭತ್ಯೆ :**

ಮಹಿಳಾ ಕೃಷಿ ಕಾರ್ಮಿಕರಿಗೆ ಹೆಂಗೆಗೆ ಮುಂಚೆ ಅಥವಾ ಬಾಣಂತಿತನದ ಕಾಲದಲ್ಲಿ ಮಾಸಿಕವಾಗಿ 100 ರೂ. ಗಳಂತೆ ಮೂರು ತಿಂಗಳು ಧನ ಸಹಾಯ. 1985-86ರಲ್ಲಿ ಈ ಸೌಲಭ್ಯ ಪಡೆದವರ ಸಂಖ್ಯೆ 86,018.

**ತಾಳಿ ಭಾಗ್ಯ :**

ಸಾಮೂಹಿಕ ವಿವಾಹಗಳನ್ನು ಪ್ರೋತ್ಸಾಹಿಸುವ ಹಾಗು ಮದುವೆ ದುಂದು ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ರೂಪಿಸಲಾಗಿರುವ ಕಾರ್ಯಕ್ರಮದನ್ವಯ, 1985-86ರಲ್ಲಿ 2,300ಕ್ಕೂ ಹೆಚ್ಚು ಮಂದಿ ಪ್ರಯೋಜನ ಪಡೆದಿದ್ದಾರೆ.

**ಕಡಿಮೆ ದರದಲ್ಲಿ ಆಹಾರ ಧಾನ್ಯ ವಿತರಣೆ :**

ವರ್ಷಕ್ಕೆ 3,500 ರೂ. ಗಿಂತ ಕಡಿಮೆ ವರಮಾನವಿರುವ ಗ್ರಾಮೀಣ ಕುಟುಂಬಗಳ ಸಹಾಯಾರ್ಥ ಇನ್ನೊಂದು ಕಾರ್ಯಕ್ರಮ. ಈ ಕಾರ್ಯಕ್ರಮದಿಂದ ಸುಮಾರು 30 ಲಕ್ಷ ಗ್ರಾಮೀಣ ಬಡ ಕುಟುಂಬಗಳು ಅನುಕೂಲ ಹೊಂದಿವೆ.

**ಜನತಾ ಸೀರೆ ಮತ್ತು ಪಂಚೆಗಳ ವಿವತರಣೆ :**

ವರ್ಷಕ್ಕೆ 3,500ರೂ. ಗಿಂತ ಕಡಿಮೆ ವರಮಾನವಿರುವ ಸುಮಾರು 43 ಲಕ್ಷ ಗ್ರಾಮೀಣ ಕುಟುಂಬಗಳವರೆಗೆ 15ರೂ.ಗೆ ಒಂದು ಪಂಚೆ ಹಾಗು ಷರ್ಟಿನ ಪೀಸು ಮತ್ತು 12.50 ರೂ. ಗೆ ಒಂದು ಸೀರೆ ಮತ್ತು ರವಿಕೆ ಕಣ ನೀಡಲಾಗುತ್ತಿದೆ.

**20-ಅಂಶಗಳ ಕಾರ್ಯಕ್ರಮದಲ್ಲಿ ಉನ್ನತ ಮಟ್ಟದ ಸಾಧನೆ :**

ಅಂಕಿ ಅಂಶಗಳು ಹಾಗೂ ಯೋಜನಾ ಆಯೋಗದ 1985-86ರ ರಾಜ್ಯವಾರು ಸ್ಥಾನ ಸೂಚಿ. ಇವುಗಳ ಪ್ರಕಾರ ಕರ್ನಾಟಕ ಈ ಕೆಳಕಂಡ ಕ್ಷೇತ್ರಗಳಲ್ಲಿ ಉನ್ನತ ಸ್ಥಾನದಲ್ಲಿದೆ.

ಗ್ರಾಮೀಣ ಭೂರಹಿತ ಕಾರ್ಮಿಕರಿಗೆ ಉದ್ಯೋಗ ಖಾತರಿ ಯೋಜನೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿ. ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆ. ಗ್ರಾಮೀಣ ವಿದ್ಯುತೀಕರಣ. ಸಸಿ ನೆಡುವಿಕೆ ಕುಟುಂಬ ಯೋಜನೆ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆ. ಸಮಗ್ರ ಶಿಶು ಕಲ್ಯಾಣ ಸೇವಾ ಕೇಂದ್ರಗಳು. ಗೊಬ್ಬರ ಅನಿಲಸ್ಥಾವರ. ವ್ಯವಸಾಯಕ್ಕೆ ಪಂಪ್‌ಸೆಟ್‌ಗಳ ವಿದ್ಯುದೀಕರಣ.

**ಬರ ಪರಿಹಾರ :**

ಬರಗಾಲ ನಿವಾರಣೆಗಾಗಿ ಸರ್ಕಾರವು ಬಹುಮುಖವಾದ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಇದರಿಂದಾಗಿ ಕೊಳವೆ ಬಾವಿಗಳು ನೀರಾವರಿ, ನಾಲೆಗಳು, ಗ್ರಾಮ ಸಂಪರ್ಕ ರಸ್ತೆಗಳು ಮತ್ತಿತರ ಶಾಶ್ವತ ಆಸ್ತಿಯ ನಿರ್ಮಾಣವಾಗಿದೆ

**ಸಾಮಾಜಿಕ ಅರಣ್ಯಾಭಿವೃದ್ಧಿ :**

ಕಳೆದ ಒಂದು ವರ್ಷದಲ್ಲಿ ಸರ್ಕಾರ ಅರಣ್ಯಾಭಿವೃದ್ಧಿ ಯೋಜನೆಯನ್ವಯ 39 000 ಹೆಕ್ಟೇರ್ ಭೂಮಿಯಲ್ಲಿ 25.46 ಕೋಟಿ ಸಸಿಗಳನ್ನು ರೈತರುಗಳಿಗೆ ತಮ್ಮ ಜಮೀನಿನಲ್ಲಿ ನೆಡಲು ಹಂಚಿದೆ.

—ಕರ್ನಾಟಕ ವಾರ್ತೆ

ಅಂತರ್‍ರಾಷ್ಟ್ರೀಯ

# ಬೊಲಿವಿಯಾ : ಈ ಎರಡು ಘಟನೆಗಳಿಗೆ ಸಂಬಂಧವಿದೆಯೇ?

**ಜುಲೈ 14**

ಮೂರು ಭಾರಿ ಅ.ಸಂ.ಸಂ. ವೈಮಾನಿಕ ದಳದ ಸಾಗಾಣಿಕೆ ವಿಮಾನಗಳು ಬೊಲಿವಿಯಾದ ಸಾಂತಾಕ್ರೊಜ್ ಬಳಿಯ ವಿಮಾನ ನಿಲ್ದಾಣದಲ್ಲಿ ಇಳಿದವು. ಈ ವಿಮಾನಗಳು 6 ಹೆಲಿಕ್ಯಾಪ್ಟರುಗಳು, ಭಾರಿ ಶಸ್ತ್ರಾಸ್ತ್ರಗಳು, 160 ಸೈನಿಕರು ಅಲ್ಲದೆ ಹಲವು FBI ಮಾದಕ ದ್ರವ್ಯ-ವಿರೋಧಿ ಏಜಂಟರುಗಳನ್ನು ಇಳಿಸಿತು. ಆಮೇಲೆ ಹೆಲಿಕ್ಯಾಪ್ಟರುಗಳು ಅ. ಸಂ. ಸಂ. ಮತ್ತು ಪ. ಯುರೋಪುಗಳಿಗೆ ಸರಬರಾಜಾಗುವ ಕೊಕೇನ್‌ನಂತಹ ಮಾದಕ ದ್ರವ್ಯಗಳಲ್ಲಿ ಮೂರನೇ ಒಂದರಷ್ಟು ತಯಾರಿಸಲಾಗುತ್ತದೆ ಎನ್ನಲಾದ ಕಾಡುಗಳ ಮೇಲೆ ಹಾರಾಡಿದವು. ಆದರೆ ಭಾರಿ ಹುಡುಕಾಟದ ನಂತರವೂ ಇಂತಹ ಯಾವುದೇ ಕೊಕೇನ್ "ಕಾರ್ಖಾನೆ"ಗಳು ಸಿಗಲಿಲ್ಲ ಬೊಲಿವಿಯಾದ ಮಾದಕವಸ್ತುಗಳ ದುಷ್ಟಕೂಟದ ನಾಯಕ "ರಜೆ"ಯ ಮೇಲೆ ದೇಶ ಬಿಟ್ಟು ಹೋಗಿದ್ದನಂತೆ! ಈ ಹುಡುಕಾಟಕ್ಕೆ ಬೊಲಿವಿಯಾ ಸರ್ಕಾರದ ಒಪ್ಪಿಗೆಯನ್ನು ಪಡೆಯಲು ಅ. ಸಂ. ಸಂ ನೀಡುವ 70 ಲಕ್ಷ ಡಾಲರುಗಳ "ಸಹಾಯಧನ"ವನ್ನು ನಿಲ್ಲಿಸುವ ಬೆದರಿಕೆ ಹಾಕಲಾಗಿತ್ತಂತೆ. ಈ ಬೆದರಿಕೆಯಿಂದಾಗಿ ಮೇಲೆ ಹೇಳಿದ ಘಟನೆಯನ್ನು "ಕೊಕೇನ್-ವಿರೋಧಿ" ಜಂಟಿ ಕಾರ್ಯಾಚರಣೆ ಎಂದು ಕಾಣುವಂತೆ ಮಾಡಲು ಸಾಧ್ಯವಾಯಿತು. ಆದರೂ ಬೊಲಿವಿಯಾ ಸರ್ಕಾರ ಅಮೇರಿಕನ್ ಸೈನಿಕರನ್ನು ನಿರೀಕ್ಷಿಸಿರಲಿಲ್ಲ FBI ಏಜಂಟರುಗಳನ್ನು ಮಾತ್ರ ನಿರೀಕ್ಷಿಸಿತ್ತು. ಅಮೇರಿಕನ್ ಪಡೆ ಎರಡು ತಿಂಗಳುಗಳ ಕಾಲ ಬೊಲಿವಿಯಾದಲ್ಲಿ ಕಾರ್ಯಾಚರಣೆ ನಡೆಸಲು ಉದ್ದೇಶಿಸಿದೆ ಈ ಪಡೆ ನಿಜವಾಗಿಯೂ ಮಾದಕ ದ್ರವ್ಯಗಳ ತಡೆಗೆ ಇದೆಯೇ? ಈ ಕೆಲಸ ಬೊಲಿವಿಯನ್ ಪೋಲೀಸ್ ಮಾಡಲಾರದೆ? ಇದು ಸಾರ್ವಭೌಮ ರಾಷ್ಟ್ರದಲ್ಲಿ ಹಸ್ತಕ್ಷೇಪವಲ್ಲವೆ? IMF ನಿರ್ದೇಶಿತ ಆರ್ಥಿಕ ನೀತಿಗಳಿಂದ ಬೇಸತ್ತ ಜನರ ಅತೃಪ್ತಿ ಎದುರಿಸಲು ಇದು ತಯಾರಿಯೇ? -ಎಂಬ ಪ್ರಶ್ನೆಗಳು ಬೊಲಿವಿಯಾ ಮತ್ತು ಅ. ಸಂ. ಸಂ. ದಲ್ಲಿ ಕೇಳಿ ಬರುತ್ತಿವೆ.

**ಆಗಸ್ಟ್ 28**

ಬೊಲಿವಿಯನ್ ಸರ್ಕಾರ ಮುಷ್ಕರ ಹೂಡಿರುವ ಗಣಿ ಕಾರ್ಮಿಕರು ರಾಜಧಾನಿ ಲಾ ಪಾಜ್ ಕಡೆ ಕಳೆದ ವಾರ ಜಾಥಾ ಹೊರಟಿದ್ದರಿಂದ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಎದುರಿಸಲು ತುರ್ತು ಪರಿಸ್ಥಿತಿ ಘೋಷಿಸಿದೆ. ಈ ಪ್ರಕ್ಷುಬ್ಧ ಪರಿಸ್ಥಿತಿಯನ್ನು "ದುರುಪಯೋಗ" ಪಡಿಸಿ "ಸರ್ಕಾರ ಉರುಳಿಸಲು ಎಂಗೆಗೆ ಯೋಜಿಸಿದ್ದ" 162 ಜನರನ್ನು ಬಂಧಿಸಲಾಗಿದೆ ಎಂದು ಸರ್ಕಾರಿ ವಕ್ತಾರರು ಹೇಳಿದ್ದಾರೆ. ಈ 162 ಜನರಲ್ಲಿ ಟ್ರೇಡ್ ಯೂನಿಯನ್ ನಾಯಕರು, ಮಾಜಿ ಕಾರ್ಮಿಕ ಮಂತ್ರಿ ಸೇರಿದಂತೆ ಹಲವು ರಾಜಕಾರಣಿಗಳು ಸೇರಿದ್ದಾರೆ, ಬಂಧಿಸಿದ ನಾಯಕರನ್ನು ದೂರದ ಬಂಧೀಖಾನೆಗಳಿಗೆ ಕಳಿಸಲಾಗುತ್ತಿದೆ.

## ತೀವ್ರ ಬಿಕ್ಕಟ್ಟಿನಲ್ಲಿ ಈಜಿಪ್ಟಿನ ಆರ್ಥಿಕತೆ

ಈಜಿಪ್ಟಿನ ವಿದೇಶಿ ಸಾಲ 3000 ಕೋಟಿ ಡಾಲರುಗಳಷ್ಟಾಗಿದ್ದು, ಇದು ಗುಣಮುಖವಾಗದ ರೋಗದ ರೂಪ ಪಡೆಯುತ್ತಿದೆ. ಈಜಿಪ್ಟಿನ ವಿದೇಶಿ ವಿನಿಮಯ ಬರುವುದು ನಾಲ್ಕು ಮೂಲಗಳಿಂದ–ತೈಲ ರಫ್ತು, ಸುಯೇಜ್ ಕಾಲುವೆಯಿಂದ ಬರುವ ಕರ, ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಈಜಿಪ್ಟಿಯನ್ನರು ಮತ್ತು ವಿದೇಶಿ ಪ್ರವಾಸಿಗರು ತೈಲ ರಫ್ತು ಶೇಕಡಾ 50ರಷ್ಟು ಇಳಿದಿದೆ. ಸುಯೇಜ್ ಕಾಲುವೆಯಿಂದ ಬರುವ ಕರ ಸ್ವಲ್ಪ ಏರಿದ್ದರೂ ಲಿಬ್ಯಾದ ಮೇಲೆ ಅಮೇರಿಕನ್ ಆಕ್ರಮಣದಿಂದುಂಟಾದ ಪರಿಸ್ಥಿತಿಯಿಂದ ನಿರೀಕ್ಷಿತ ಮಟ್ಟಕ್ಕೆ ಬಂದಿಲ್ಲ. ಇತರ ದೇಶಗಳಲ್ಲಿ ಈಜಿಪ್ಟ್ ಮೂಲದ ಕಾರ್ಮಿಕರಿಗೆ ಬೇಡಿಕೆ ಇಳಿದಿದೆ. ಪ್ರಕ್ಷುಬ್ಧ ಪರಿಸ್ಥಿತಿಯಿಂದಾಗಿ ಪ್ರವಾಸಿಗರ ಸಂಖ್ಯೆ ಸಹ ಇಳಿದಿದೆ ಹೀಗೆ ಈ ನಾಲ್ಕು ಮೂಲಗಳು ನಿರೀಕ್ಷಿತ ಮಟ್ಟದಲ್ಲಿ ವಿದೇಶಿ ವಿನಿಮಯ ತಂದಿಲ್ಲ ಆದರೆ ಅಧ್ಯಕ್ಷ ಸಾದತ್ ಆರಂಭಿಸಿದ "ಮುಕ್ತದ್ವಾರ"ದ ನೀತಿ ಸಾಕಷ್ಟು ದುಬಾರಿಯಾಗಿದೆ. ಅಮೇರಿಕನ್ ಬಂಡವಾಳ ಈಜಿಪ್ಟ್‌ಗೆ ದೊಡ್ಡ ಪ್ರಮಾಣದಲ್ಲಿ ಹರಿದಿದೆ. ವಸ್ತುಗಳು, ಉಪಕರಣಗಳು, ವಿಶೇಷಜ್ಞರು ಈ ರೂಪದಲ್ಲಿ ಭಾರಿ ಮೊತ್ತ ಅಮೇರಿಕನ್ ಕಂಪನಿಗಳಿಗೆ ಹೋಗುತ್ತಿದೆ. ಅಮೇರಿಕನ್ ವಿಶೇಜ್ಞರ ವೆಚ್ಚ ವಿವಿಧ ಕಾರ್ಯಗಳ ಶೇಕಡಾ 40 ರಷ್ಟು ಇರುತ್ತದೆ. "ಮುಕ್ತದ್ವಾರ" ನೀತಿ ಈಜಿಪ್ಟಿನ ಸಮಾಜವನ್ನು ಭರದಲ್ಲಿ ಧ್ರುವೀಕರಿಸುತ್ತಿದೆ. ಒಟ್ಟಾರೆ 100 ಶತಕೋಟ್ಯಾಧೀಶರು ಈಜಿಪ್ಟ್‌ನಲ್ಲಿದ್ದಾರೆಂದು ಅಂದಾಜು ಮಾಡಲಾಗಿದೆ. ಅದೇ ಸಮಯದಲ್ಲಿ ಈಜಿಪ್ಟ್‌ನ ಶೇಕಡಾ 40 ಜನರು ಅತಿ ಬಡವರು. ವಸತಿ ಸಮಸ್ಯೆ ತೀವ್ರವಾಗಿದೆ. ಅಧ್ಯಕ್ಷ ಮುಬಾರಕ್ ದೇಶದ ಆರ್ಥಿಕತೆ, ಬಡವರ ಪರಿಸ್ಥಿತಿ ಉತ್ತಮ ಪಡಿಸಲು ಪ್ರಯತ್ನ ಪಡುತ್ತಿದ್ದರೂ, "ಮುಕ್ತದ್ವಾರ" ನೀತಿಗೆ ಅದರದೇ ಆದ ದಾರಿ ಇದಕ್ಕೆ ಅಡ್ಡ ಬರುತ್ತಿದೆ.

# ಚೀನಾ-ರಶ್ಯಾ ಆರ್ಥಿಕ ಸಂಬಂಧಗಳಲ್ಲಿ ಹೆಚ್ಚಳ

ಚೀನಾ ಮತ್ತು ರಷ್ಯಾಗಳು ಚರಿತ್ರೆಯಲ್ಲೇ ಮೊದಲ ಬಾರಿಗೆ 5 ವರ್ಷಗಳ ವಾಣಿಜ್ಯ ಒಪ್ಪಂದಗಳಿಗೆ ಸಹಿ ಹಾಕಿವೆ. ಇದು 1990ರ ವರೆಗೆ ಜಾರಿಯಲ್ಲಿರುತ್ತದೆ. ಈ ಒಪ್ಪಂದ ಎರಡೂ ದೇಶಗಳ ನಡುವಣ ಆರ್ಥಿಕ ಸಂಬಂಧಗಳನ್ನು ಭದ್ರ ತಳಹದಿಯ ಮೇಲೆ ನೆಲೆಗೊಳಿಸುವಲ್ಲಿ ಮುಖ್ಯ ಹೆಜ್ಜೆ. ಇದು ಒಂದು ಅರ್ಥಪೂರ್ಣ ಬೆಳವಣಿಗೆ.

ಚೀನಾ-ರಷ್ಯಾ ವಾಣಿಜ್ಯ ಸಂಬಂಧಗಳು ಹಲವು ಏಳು-ಬೀಳುಗಳನ್ನು ಕಂಡಿದೆ. ಚೀನಾದ ಮುಕ್ತಿ ಹೋರಾಟದ ವಿಜಯದಿಂದ 1960ರ ವರೆಗಿನ ಮೊದಲ ಅವಧಿಯಲ್ಲಿ ರಶ್ಯಾ ದೀರ್ಘ ಹೋರಾಟದಿಂದ ಜರ್ಝರಿತವಾದ ಆರ್ಥಿಕತೆಯನ್ನು ಸುಧಾರಿಸಿ ಸಮಾಜವಾದಿ ಪುನಃರ್ರಚನೆಯ ಕಾರ್ಯದಲ್ಲಿ ಸಂಪೂರ್ಣ ಸಹಕಾರ, ಸಹಾಯ ನೀಡಿತು ಈ ಅವಧಿಯ ಕೊನೆಯ ಹೊತ್ತಿಗೆ ವಾಣಿಜ್ಯ ಪರಮಾವಧಿಯಾದ 184 9 ಕೋಟಿ ರೂಬಲ್‌ಗಳನ್ನು ಮುಟ್ಟಿತ್ತು.

1960-1970ರ ಎರಡನೆಯ ಅವಧಿಯಲ್ಲಿ ವಾಣಿಜ್ಯ ಇಳಿಮುಖವಾಯಿತು. ಇದಕ್ಕೆ ಆಂತರಿಕ ಆರ್ಥಿಕ ಕಾರಣ ಮತ್ತು ಪ್ರಾಕೃತಿಕ ವಿಕೋಪಗಳಲ್ಲದೆ ರಾಜಕೀಯ ವಿರಸ ಸಹ ಕಾರಣಗಳಾಗಿದ್ದವು. 1966-70ರ ಅವಧಿಯಲ್ಲಿ ವಾಣಿಜ್ಯ ಸಂಬಂಧಗಳು ಕನಿಷ್ಟ ಮಟ್ಟಕ್ಕೆ ತಲುಪಿದವು. ಕನಿಷ್ಟ ಮಟ್ಟ 19.0ರಲ್ಲಿ 4.2 ಕೋಟಿ ರೂಬಲ್‌ಗಳು ಅಂದರೆ 1959ರ ಮಟ್ಟಕ್ಕಿಂತ 97.7 ಶೇಕಡಾ ಕಡಿಮೆಯಾಗಿತ್ತು. ಚೀನಾದ ವಿದೇಶಿ ವಾಣಿಜ್ಯದ 50 ಶೇಕಡ 1959 ರಲ್ಲಿ ರಷ್ಯದ್ದಾಗಿದ್ದರೆ ಆದು 1966ರಲ್ಲಿ ಶೇಕಡಾ 7.3ಕ್ಕೆ ಮತ್ತು 1970ರಲ್ಲಿ ಶೇಕಡಾ 1.8ಕ್ಕಿಳಿಯಿತು.

1971-1980ರ ಮೂರನೇ ಅವಧಿಯಲ್ಲಿ ವಾಣಿಜ್ಯ ಸಂಬಂಧಗಳು ಪುನಃ ಸುಧಾರಿಸಿ 20-30 ಕೋಟಿ ರೊಬಲ್‌ಗಳಷ್ಟು ಮಟ್ಟಕ್ಕೆ ಬಂದವು. ಕಳೆದ 5 ವರ್ಷಗಳಲ್ಲಿ ಸತತವಾಗಿ ಚೀನಾ-ರಶ್ಯಾ ವಾಣಿಜ್ಯ ಏರುತ್ತಿದೆ. 1985ರಲ್ಲಿ ಹೆಚ್ಚು ಕಡಿಮೆ ಪರಮಾವಧಿಯ ಮಟ್ಟದ ಹತ್ತಿರಕ್ಕೆ ಬಂದಿದೆ -160 ಕೋಟಿ ರೂಬಲ್‌ಗಳು.

30 ವರ್ಷಗಳ ನಂತರ ಚೀನಾದ 22 ಕಂಪನಿಗಳು ಮತ್ತು 5 ಮಂತ್ರಿಗಳು ಭಾಗವಹಿಸಿದ ವಾಣಿಜ್ಯ ಪ್ರದರ್ಶನ ಮಾಸ್ಕೋದಲ್ಲಿ ನಡೆಯಿತು ಸುಮಾರು 4000 ಚೀನಿ ವಸ್ತುಗಳು ಪ್ರದರ್ಶಿತವಾದವು. ಇಂತಹುದೇ ರಶ್ಯನ್ ಪ್ರದರ್ಶನ ಚೀನಾದಲ್ಲಿ ಸದ್ಯಕ್ಕೆ ನಡೆಯಲಿದೆ.

> ವಾರ್ಸಾನಗರದ "ಸಂಸ್ಕೃತಿ ಮತ್ತು ವಿಜ್ಞಾನ ಅರಮನೆ"ಯಲ್ಲಿ ಐದು ವರ್ಷಗಳ ಹಿಂದೆ ಪೋಲೀಷ್ ಸಂಯುಕ್ತ ಕಾರ್ಮಿಕ ಪಕ್ಷದ ಒಂಭತ್ತನೇ ವಿಶೇಷ ಮಹಾಧಿವೇಶನ ನಡೆದಾಗ ಅಧಿವೇಶನದ ಸಭಾಂಗಣದಲ್ಲಿ ಕಾಣಬರುತ್ತಿದ್ದ ಘೋಷಣೆ "ಸ್ವಾತಂತ್ರ್ಯದಂತೆ ಸಮಾಜವಾದವನ್ನು ಕೂಡಾ ರಕ್ಷಿಸಬೇಕು". ಇತ್ತೀಚೆಗೆ ನಡೆದ ಆ ಪಕ್ಷದ ಹತ್ತನೇ ಅಧಿವೇಶನದ ಸಭಾಂಗಣದಲ್ಲಿ ಕಣ್ಸೆಳೆಯುತ್ತಿದ್ದ ಘೋಷಣೆ-'ಜನತೆಗೆ ನೇತೃತ್ವ ನೀಡುವ ಮೂಲಕ ಪಕ್ಷ ಅವರಿಗೆ ಸೇವೆ ಸಲ್ಲಿಸುತ್ತದೆ". ಕಳೆದ ಐದು ವರ್ಷಗಳಲ್ಲ ಪೋಲಂಡಿನಲ್ಲಾದ ಬದಲಾವಣೆಗಳಿಗೆ ಈ ಘೋಷಣೆಗಳೇ ಸಾಕ್ಷಿ.

## ಧಾರವಾಡದಲ್ಲಿ ಅಧ್ಯಯನ ಶಿಬಿರ

(3ನೇ ಪುಟದಿಂದ)

ತಂತಜ್ಞಾನ"ದ ಕುರಿತಾಗಿದ್ದು, ಕ. ಕೃ. ವಿದ್ಯಾನಿಲಯದ ಮನಶಾಸ್ತ್ರ ವಿಭಾಗದ ಡಾ. ಬಿ. ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಕ.ವಿ ಯದ ಭೌತಶಾಸ್ತ್ರ ವಿಭಾಗದ ಡಾ. ವಿ. ಎನ್. ಕೋರವಾರ್ ಮತ್ತು ಸಸ್ಯಶಾಸ್ತ್ರ ವಿಭಾಗದ ಡಾ. ಎಂ. ಜಿ. ಪಂಚಾಕ್ಷರಪ್ಪ ಅವರ ಪ್ರಬಂಧಗಳೂ, ಸ್ಥಳೀಯ ಕುಟುಂಬ ಕಲ್ಯಾಣ ಸಂಸ್ಥೆಯ ಶ್ರೀಮತಿ ಮಿರಾ ಹಳಕಟ್ಟಿಯವರ ವಿಚಾರ ಪ್ರತಿಪಾದನೆಗಳೂ ಚರ್ಚಿತವಾದವು. ಎರಡನೇ ಅದಿವೇಶನವು. 'ಸಮಾಜ ವಿಜ್ಞಾನ ಮತ್ತು ಮಾನವ ಶಾಸ್ತ್ರಗಳ ಕುರಿತಾಗಿದ್ದು, ಕ.ವಿ.ಯದ ಸಮಾಜಶಾಸ್ತ್ರ ವಿಭಾಗದ ಡಾ. ಅನಿಲ್ ಮೂಡುಬಿದ್ರೆಯವರು ಅಧ್ಯಕ್ಷತೆ ವಹಿಸಿದ್ದರು. ಡಾ. ಬಿ. ಕೃಷ್ಣಮೂರ್ತಿ ಕ.ವಿ. ಯದ ಡಾ. ತೋಂಟದಾರ್ಯ ಅವರ ಪ್ರಬಂಧಗಳೂ, ಗಾಂಧಿ ಅಧ್ಯಯನ ಸಂಸ್ಥೆಯ ಪ್ರೊ. ಶಿವಾನಂದ ಶೆಟ್ಟರ್ ಅವರ ವಿಚಾರ ಪ್ರತಿಪಾದನೆಗಳು ಚರ್ಚಿತವಾದುವು. ಕ.ವಿ. ಯದ ಸ್ಥಳೀಯ ಶಿಕ್ಷಣ ಸಂಸ್ಥೆಗಳ, ಕಾರ್ಮಿಕ ವಿದ್ಯಾರ್ಥಿ, ಯುವ ಜನ, ಮಹಿಳಾ ಸಂಘಟನೆಗಳ ಪ್ರತಿನಿಧಿಗಳೂ ಸೇರಿದಂತೆ ಸುಮಾರು ನೂರು ಜನರು ಅಧ್ಯಯನ ಶಿಬಿರದಲ್ಲಿ ಭಾಗವಹಿಸಿದರು.

ಕೊನೆಗೆ ಸಮಾರೋಪ ಸಮಾರಂಭದಲ್ಲಿ, ಎರಡೂ ಅಧಿವೇಶನಗಳಲ್ಲಿ ಚರ್ಚಿತವಾದ ವಿಷಯಗಳ ಸಾರಾಂಶ ವರದಿಗಳನ್ನು ಡಾ. ವಿ. ಎನ್. ದೇಶಪಾಂಡೆ ಮತ್ತು "ಸಮುದಾಯ" ಕೇಂದ್ರ ಸಮಿತಿ ಸದಸ್ಯ ಶ್ರೀ ಸಿ. ಆರ್. ಭಟ್, ಅವರು ಮಂಡಿಸಿದರು. ಅಧ್ಯಕ್ಷ ಸ್ಥಾನದಿಂದ, ವಿಶ್ವವಿದ್ಯಾನಿಲಯದ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ. ಎಂ. ಪಟ್ಟೇದ್ ಅವರು ಮಾತನಾಡುತ್ತ, ಅಧ್ಯಯನ ಶಿಬಿರವು ಹೆಚ್ಚಾಗಿ ಶಿಕ್ಷಣ-ಸಮಾಜಗಳೊಳಗಿನ ಸಂಬಂಧ ಕುರಿತು ಚರ್ಚಿಸಿರುವುದನ್ನು ಪ್ರಕಟಿಸಿದರು, ಶಿಕ್ಷಕರ ತರಬೇತಿಯ ಅಗತ್ಯತೆಯನ್ನು ಒತ್ತಿ ಹೇಳಿದರು. ಇದುವರೆಗಿನ ಶಿಕ್ಷಣವು ಮುಖ್ಯವಾಗಿ ಉಚ್ಚ ಶಿಕ್ಷಣವು ಹೆಚ್ಚಿನ ಯುವ ಜನಾಂಗವನ್ನು ನಿರ್ವೀರ್ಯಗೊಳಿಸಿದೆ. ಅವರು ಮೆದುಳಿನಿಂದಾಗಲೀ ದೈಹಿಕ ಶ್ರಮದಿಂದಾಗಲೀ ಸ್ವಾವಲಂಬಿಗಳಾಗಲು ಅಸಮರ್ಥರಾಗಿದ್ದಾರೆ ಎಂದು ವಿಷಾದಿಸಿದರು. ಹೊಸ ಶಿಕ್ಷಣ ನೀತಿಯ ವಿಮರ್ಶೆಯೊಂದಿಗೆ ಪರ್ಯಾಯ ನೀತಿಯನ್ನು ನಿರೂಪಿಸುವಲ್ಲಿ ಇಂತಹ ಅಧ್ಯಯನ ಶಿಬಿರಗಳು ಸಹಕಾರಿಯಾಗಲಿ ಎಂದು ಹಾರೈಸಿದರು.

ಪ್ರಾರಂಭದಲ್ಲಿ ಶ್ರೀ ಸಿ ಆರ್. ಭಟ್ ಅವರು ಕೇಂದ್ರದ ಧ್ಯೇಯೋದ್ದೇಶಗಳನ್ನು ಪರಿಚಯಿಸಿ, ಪ್ರತಿನಿಧಿಗಳನ್ನು ಸ್ವಾಗತಿಸಿದರು. ಕೊನೆಯಲ್ಲಿ ಕೇಂದ್ರದ ಕೋಶಾಧಿಕಾರಿ ಶ್ರೀ ಬಿ. ಎಸ್. ಜೋಸ್ಪಿನ್ ಅವರು ಧನ್ಯವಾದ ಹೇಳಿದರು.

ಅಧ್ಯಯನ ಶಿಬಿರದ ಪೂರ್ಣ ದಸ್ತಾವೇಜು ಸದ್ಯದಲ್ಲಿಯೇ ಪ್ರಕಟವಾಗಲಿದೆ.

# ಕೃಷ್ಣ ಯೋಜನೆಗೆ ಸಂಪನ್ಮೂಲ

(ಒಂದನೇ ಪುಟದಿಂದ)

ಉಪಯೋಗದ ಅವಶ್ಯಕತೆಯನ್ನು ಅಂತಿಲ್ಲಿಂದೇನೂ ಅಲ್ಲ. ಕಮ್ಯೂನಿಸ್ಟ್ ಪಕ್ಷ, ಪ್ರಾಂತ ರೈತ ಸಂಘಗಳು ಈ ಯೋಜನೆಗಳ ಪೂರೈಕೆಗಾಗಿ ಆಂದೋಲನ ನಡೆಸಿದಾಗೆಲ್ಲ "ಮಾಡಿಯೇ ತೀರುತ್ತೇವೆ" ಎಂದು ಹೇಳುತ್ತ ಬಂದವರೇ ಈ ಜನ. ಇಷ್ಟು ವರ್ಷ ಈ ಯೋಜನೆಗಳಿಗಾಗಿ ಮೊಸಳೆ ಕಣ್ಣೀರು ಸುರಿಸುತ್ತ ಬಂದ ಈ ಮಹಾಶಯರೆಲ್ಲ ಈಗ ವಿಧಾನ ಸಭೆಯೊಳಗೂ ಹೊರಗೂ ಕಳವಳ ವ್ಯಕ್ತ ಮಾಡುತ್ತಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದಲೂ ರಾಜ್ಯ ಎದುರಿಸುತ್ತಿರುವ ಬರಗಾಲದ ಬವಣೆ ಒಂದೆಡೆಯಾದರೆ, ಅದಕ್ಕಿಂತಲೂ ಹೆಚ್ಚಾಗಿ ತೆಲುಗು-ಗಂಗಾ ಯೋಜನೆ ಪೂರ್ಣಗೊಳಿಸಿಯೇ ತೀರುತ್ತೇವೆಂಬ ಆಂಧ್ರ ಸರಕಾರದ ನಿರ್ಧಾರವೇ ಮುಖ್ಯ ಕಾರಣವಾಗಿದೆ. ಕರ್ನಾಟಕ-ಮಹಾರಾಷ್ಟ್ರಗಳು ತಮ್ಮ ಪಾಲಿನ ನೀರನ್ನು ಉಪಯೋಗಿಸುತ್ತಿಲ್ಲ ಅದು ಸಮುದ್ರದ ಪಾಲಾಗುತ್ತಿದೆ. ಆದ್ದರಿಂದ ಆ ನೀರನ್ನು ಆಂಧ್ರದ ಬರಗಾಲ ಪ್ರದೇಶಕ್ಕೂ, ಮದ್ರಾಸ್ ನಗರಕ್ಕೆ ನೀರು ಸರಬರಾಜಿಗೂ ಉಪಯೋಗಿಸುತ್ತೇವೆಂದು ಆಂಧ್ರ ಸರ್ಕಾರದ ವಾದ. ಇದಕ್ಕೆ ಅಂಜಿಯೇ ಈಗ ಎಲ್ಲರ ಒಕ್ಕೊರಲಿನ ಕೂಗು ಕೃಷ್ಣ ಯೋಜನೆಗೆ ಹೆಚ್ಚು ಸಂಪನ್ಮೂಲ ಒದಗಿಸಲೇ ಬೇಕೆಂಬುದಾಗಿದೆ. ಮನೆಗೆ ಬೆಂಕಿ ಹತ್ತಿದಾಗ ಬಾವಿ ತೊಡಿಸುವ ಪ್ರಯತ್ನ.

ಹಿಂದಿನ ಕಾಂಗ್ರೆಸ್ ಸರಕಾರ ಕೃಷ್ಣ ಯೋಜನೆಗೆ ನಿಷ್ಕಾಳಜಿ ತೋರಿಸಿತ್ತು. ಈಗಿನ ಜನತಾ ಸರ್ಕಾರದ ನೀತಿಯಲ್ಲಿಯೂ ಅದರ ಕುರಿತು ಬದಲಾವಣೆ ಕಂಡುಬರುತ್ತಿಲ್ಲ. ಲೋಕೋಪಯೋಗಿ ಮಂತ್ರಿ ದೇವೇಗೌಡರು ಹೆಚ್ಚಿನ ಸಂಪನ್ಮೂಲ ಬೇಕೆಂದು ಹೇಳುತ್ತಾರೆ. ಅದಕ್ಕೆ ಉಪಾಯಗಳನ್ನೂ ಬಹಿರಂಗವಾಗಿಯೇ ಸೂಚಿಸುತ್ತಾರೆ. ಆದರೆ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಅಂಥ ಸೂಚನೆಗಳಿಗೆ ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸಿದ್ದಾರೆ. ಈ ರೀತಿ ಜನತಾ ಮಂತ್ರಿಮಂಡಲದಲ್ಲಿಯೇ ಕೃಷ್ಣಾ ಯೋಜನೆಯನ್ನು ಶೀಘ್ರವಾಗಿ ಮುಕ್ತಾಯಗೊಳಿಸುವ ಕುರಿತು ಒಮ್ಮತವಿದ್ದಂತೆ ಕಂಡುಬರುವುದಿಲ್ಲ.

1962ರ ಮುಂಚೆಯೇ ಕೃಷ್ಣಾ ಯೋಜನೆಯನ್ನು ಕೈಗೊಂಡಿದ್ದರೆ ರೂ 100 ಕೋಟಿ ಖರ್ಚಾಗುತ್ತಿತ್ತು. 1964ರ ನಂತರ ಅದು ಮತ್ತೊಂದು ನೂರು ಕೋಟಿಯಷ್ಟು ಹೆಚ್ಚಾಯಿತು. ಈಗ ಅದು ಒಂದು ಸಾವಿರ ಕೋಟಿ ಮೀರಿದೆ. ದೇವೇಗೌಡರ ಹೇಳಿಕೆ ಪ್ರಕಾರ ಕ್ರಿ. ಶ 2000ರಲ್ಲಿ ಅದನ್ನು ಮುಗಿಸುತ್ತಾರಂತೆ. ಅಷ್ಟೊತ್ತಿಗೆ ಅದಕ್ಕಾಗಬಹುದಾದ ಖರ್ಚು ಮೂರು ಸಾವಿರ ಕೋಟಿ ರೂಪಾಯಿ. ರಾಜ್ಯಕ್ಕೆ ಸಲ್ಲತಕ್ಕ ನೀರಿನ ಪೂರ್ಣ ಉಪಯೋಗವಾಗಲೇ ಬೇಕು. ಬರಗಾಲಕ್ಕೆ ಶಾಶ್ವತ ಪರಿಹಾರ ಒದಗಿಸಲೇ ಬೇಕು. ರೈತರ ಬವಣೆ ದೂರೀಕರಿಸಲೇಬೇಕೆಂಬಾಶಯ ಹೊಂದಿದ ಯಾವ ಸರ್ಕಾರವೂ ಇಂಥ ನಿಲುವು ತಾಳಲು ಸಾಧ್ಯವಿಲ್ಲ.

1984- 85 ರ ಆಡಿಟ್ ವರದಿಯ ಪ್ರಕಾರ ರೂ. 208 ಕೋಟಿ ತೆರಿಗೆ ವಸೂಲಿಯಾಗದೆ ಉಳಿದಿದೆ. ಅದನ್ನು ವಸೂಲಿ ಮಾಡಿ ಕೃಷ್ಣಾ ಯೋಜನೆಗೆ ಖರ್ಚು ಮಾಡಬಹುದು, ಹಾಗೆಯೇ ಮಠಗಳಿಕೆಗಾಗಿಯೇ ಅಗ್ಗದ ಪ್ರಚಾರಕ್ಕಾಗಿಯೇ ಕೈಗೊಂಡಿರುವ ಹಲವಾರು ಯೋಜನೆಗಳಿಗೆ ನಾಲ್ಕೈದು ವರ್ಷ ವಿಶ್ರಾಂತಿ ನೀಡಿ ಕೃಷ್ಣಾ ಯೋಜನೆಯನ್ನು ಶೀಘ್ರವಾಗಿ ಮುಗಿಸಬಹುದಾಗಿದೆ.

ಯೋಜನೆಗಳು ಸಕಾಲದಲ್ಲಿ ಸಾರ್ಥಕವಾಗಿ, ಮುಕ್ತಾಯವಾಗಿ ಜನರಿಗೆ ಅದರ ಪ್ರತಿಫಲ ದೊರಕುವಂತಾಗಬೇಕಾದರೆ ಆಳುವ ಪಕ್ಷಕ್ಕೆ ರಾಜಕೀಯ ದೃಢ ನಿರ್ಣಯ ಕೈಗೊಳ್ಳುವ ಧೈರ್ಯ ಬೇಕು. ಜನತಾ ಸರಕಾರಕ್ಕೆ ಅದಿಲ್ಲದಾಗಿದೆ. ಹಿಂದಿನ ಕಾಂಗ್ರೆಸ್ ಸರಕಾರವೂ ಅಂಥ ನಿಲುವು ತಾಳುವಲ್ಲಿ ಹಿಂದೇಟು ಹಾಕಿ ಮೂರು ಜಿಲ್ಲೆಗಳ ರೈತರಿಗೆಲ್ಲ ಅನ್ಯಾಯ ಮಾಡಿವೆ. ಹೆಗಡೆ ಸರಕಾರವು ಅದರಲ್ಲಿ ನಿರ್ಣಾಯಕ ಬದಲಾವಣೆ ಮಾಡಲು ಹಿಂದೇಟು ಹಾಕುತ್ತಿದೆ.

ಮೊಸಳೆ ಕಣ್ಣೀರು ಸುರಿಸುವ ಈ ಜನರಿಗೆ ಸರಿಯಾದ ಬುದ್ಧಿ ಕಲಿಸಬೇಕು. ಕೃಷ್ಣಾ ಯೋಜನೆ ಶೀಘ್ರವಾಗಿ ಮುಗಿಯುವಂತಾಗ ಬೇಕು. ಕಾಲ ಪರಿಪಕ್ವವಾಗಿದೆ ರೈತರು ಹೋರಾಡಲು ತಯಾರಿದ್ದಾರೆ. ಬರಗಾಲದ ಬವಣೆ ಸರಕಾರದ ನಿಷ್ಕ್ರಿಯತೆ ಅವರಲ್ಲಿ ರೋಷ ಉಂಟು ಮಾಡಿದೆ. ಪ್ರಾಂತ ರೈತ ಸಂಘ, ಇತರ ಎಡ ಪಕ್ಷಗಳ ಜಾಗೆಯೇ ಕೃಷ್ಣಾ ಯೋಜನೆ ಆಗಲೇಬೇಕೆಂದು ಆಶಿಸುವ ಶಕ್ತಿಗಳನ್ನೆಲ್ಲ ಕ್ರೋಢೀಕರಿಸಿ ಸಂಯುಕ್ತ ಹೋರಾಟದ ಯೋಜನೆ ರೂಪಿಸಲಿ. ಕೃಷ್ಣಾ ಯೋಜನೆ ಶೀಘ್ರ ಪೂರೈಸಲಿ ಅದರ ನೀರು ದುಡಿಯುವ ರೈತರ ಭೂಮಿ ತೊಯಿಸಲಿ, ಉತ್ತಮ ಫಸಲು ಬೆಳೆಯುವಂತಾಗಲಿ ಆದರಿಂದ ರೈತರ, ಸಾರ್ವಜನಿಕರ ಹೊಟ್ಟೆ ತಣಿಯುವಂತಾಗಲಿ.

ಕರ್ನಾಟಕ ಪ್ರಾಂತ ರೈತ ಸಂಘ ಈ ಆಹ್ವಾನ ಸ್ವೀಕರಿಸಬೇಕು. ಹೋರಾಟದ ಕಹಳೆ ಮೊಳಗಿಸಬೇಕು ಸಾವಿರ ಸಾವಿರ ಸಂಖ್ಯೆಯಲ್ಲಿ ರೈತರು ಹೋರಾಟಕ್ಕಿಳಿಯಬೇಕು.

ಇದು ಅತ್ಯಂತ ತುರ್ತಿನ ಕರ್ತವ್ಯ ಅದನ್ನು ಸಾಧಿಸಲು ಮುಂದಾಗೋಣ.

○

---

## ಡಿ. ವೈ. ಎಫ್. ಐ. ಸಭೆ

22-8-1986 ನೇ ಶುಕ್ರವಾರ ಕಪ್ಪೆ ಪದವು ಪ್ರದೇಶದಲ್ಲಿ ಡಿ. ವೈ. ಎಫ್.ಐ. ವಿಸ್ತೃತ ಸಭೆಯು ವಾಸುದೇವ ಆಚಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ತಾಲ್ಲೂಕು ಸಮಿತಿಯ-ಪರವಾಗಿ ಕೃಷ್ಣಪ್ಪ ಪೂಜಾರಿ ವಾಮಂಜೂರು ಅವರು ಸಭೆಯಲ್ಲಿ ಹಾಜರಿದ್ದರು.

ಸಭೆಯಲ್ಲಿ ಡಿ.ವೈ ಎಫ್.ಐ. ಬಗ್ಗೆ ಬಾಲಕೃಷ್ಣರೆಡ್ಡಿ, ಕೃಷ್ಣಪ್ಪಪೂಜಾರಿ, ಸದಾಶಿವದಾಸ್, ನೀಲಯನಾಯ್ಕ್ ಮತ್ತು ಕಾ|| ವಸಂತ ಆಚಾರಿಯವರು ಮಾತನಾಡಿದರು. ಸಭೆಯು ಬಾಲಕೃಷ್ಣಶೆಟ್ಟಿ, ಅಧ್ಯಕ್ಷರನ್ನಾಗಿಯೂ, ಸುಂದರನಾಯ್ಕ್ ಮತ್ತು ಅಹಮ್ಮದ್ ಅವರನ್ನು ಉಪಾಧ್ಯಕ್ಷರನ್ನಾಗಿಯೂ, ಕಾ| ಸದಾಶಿವದಾಸ್‌ರನ್ನು ಕಾರ್ಯದರ್ಶಿಯನ್ನಾಗಿಯೂ, ಭಾಸ್ಕರ್ ಆಚಾರಿ ಮತ್ತು ವಾಸುದೇವ ಆಚಾರಿಯರನ್ನು ಜತೆ ಕಾರ್ಯದರ್ಶಿಯನ್ನಾಗಿಯೂ, ವಸಂತ ಆಚಾರಿಯವರನ್ನು ಕೋಶಾಧಿಕಾರಿಯನ್ನಾಗಿಯೂ ಮತ್ತು 13 ಮಂದಿಯ ವಲಯ ಸಮಿತಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಸಭೆಯ ಪ್ರಾರಂಭದಲ್ಲಿ ವಸಂತ ಆಚಾರಿಯವರು ಸ್ವಾಗತಿಸಿದರು. ಮತ್ತು ಕೊನೆಯಲ್ಲಿ ಕಾ| ಸದಾಶಿವದಾಸ್ ಅವರು ಧನ್ಯವಾದವನ್ನರ್ಪಿಸಿದರು.

○

## ಡಿ.ವೈ.ಎಫ್.ಐ ಅಧ್ಯಕ್ಷ ಎಂ. ವಿಜಯಕುಮಾರ್‌ರವರ ಮೇಲಿನ ಹಲ್ಲೆಗೆ ಖಂಡನೆ-ಬಂಧನ

ಕೇರಳದ ರಾಜ್ಯ ಸರ್ಕಾರ ತನ್ನ ಪೋಲೀಸ್ ಬಲವನ್ನುಪಯೋಗಿಸಿ ನಿರುದ್ಯೋಗಿ ಹೋರಾಟಗಾರರ ಪ್ರಜಾಸತ್ತಾತ್ಮಕ ಹಕ್ಕನ್ನು ಹತ್ತಿಕ್ಕಲು ನೋಡುತ್ತಿತ್ತು. ಸಹಸ್ರಾರು ಬಂಧನಗಳಾಗಿವೆ. ಹಲವರು ಪ್ರಾಣತೆತ್ತಿದ್ದಾರೆ. 30-8-86 ರಂದು ಡಿ ವೈ. ಎಫ್. ಅಧ್ಯಕ್ಷರಾದ ಕಾ, ಎಂ.ವಿಜಯಕುಮಾರ್‌ರವರನ್ನೂ ಪೋಲೀಸರು ಥಳಿಸಿರುತ್ತಾರೆ.

ಉದ್ಯೋಗ ಅಥವಾ ನಿರುದ್ಯೋಗ ಭತ್ಯೆಗಾಗಿ ಕೇರಳದಲ್ಲಿ ನಡೆಯುತ್ತಿರುವ ಡಿ.ವೈ.ಎಫ್.ಐ. ನ ಹೋರಾಟವನ್ನು ಬೆಂಬಲಿಸಿ ಮತ್ತು ಎಂ. ವಿಜಯಕುಮಾರ್‌ರವರ ಮೇಲಿನ ಹಲ್ಲೆಯನ್ನು ಖಂಡಿಸಿ 2-9-1986 ರಂದು ಬೆಂಗಳೂರಿನಲ್ಲಿ ಡಿ. ವೈ. ಎಫ್. ಐ. [illegible] ಕಾರ್ಯಕರ್ತರು ರಾಜಭವನ್ ಚಲೋ ಮಾಡಿ ಶ್ರೀ ಜೈಲ್‌ಸಿಂಗ್‌ರವರಿಗೆ ಮನವಿ ಅರ್ಪಿಸಲು ಹೋದಾಗ ಪೋಲೀಸರು ಬಂಧಿಸಿದರು. ಬಂಧಿತರಲ್ಲಿ ರಾಜ್ಯಕಾರ್ಯದರ್ಶಿ, ಎಸ್. ಶಿವರಾ[illegible] ಜಿಲ್ಲಾಕಾರ್ಯದರ್ಶಿ ಟಿ. ಶಿವಶಂಕರ್ ಅಧ್ಯಕ್ಷ [illegible]ರಾವ ಶ್ರೀನಿವಾಸ್ ಒಳಗೊಂಡಿದ್ದರು.

## ಸ್ವಾತಂತ್ರ್ಯ ಚಳುವಳಿ ಮತ್ತು ರಾಷ್ಟ್ರೀಯ ಸಮಗ್ರತೆ ಕುರಿತು ವಿಚಾರ ಸಂಕಿರಣ

ಆಗಸ್ಟ್ 29 ರಂದು ಚಿಂತಾಮಣಿಯ ಪುರಸಭಾಗಂಣದಲ್ಲಿ ಎಸ್. ಎಫ್ ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳು ಭಾರತದ ಸ್ವಾತಂತ್ರ್ಯ ಚಳುವಳಿ ಮತ್ತು ರಾಷ್ಟ್ರೀಯ ಸಮಗ್ರತೆ ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಡಿ ವೈ. ಎಫ್. ಐ. ನ ಜಿಲ್ಲಾ ಸಂಚಾಲಕರಾದ ಕಾ. ಕೆ. ವಿ. ಸತ್ಯನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಡಾಕ್ಟರ್ ರಾಮಚಂದ್ರ ಗೌಡರವರು ಬ್ರಿಟೀಷರ ಆಗಮನ ಸಂಪೂರ್ಣ ಸ್ವರಾಜ್ಯಕ್ಕಾಗಿ ನಡೆದ ಹೋರಾಟದ ಹಿನ್ನೆಲೆಗಳನ್ನು ವಿವರಿಸಿದರು. ಕಾ. ಸತ್ಯನಾರಾಯಣರವರು ಮಾತನಾಡಿ 1857 ರ ಸಿಪಾಯಿ ದಂಗೆ 1885 ರ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ, ಕಾಂಗ್ರೆಸ್ ನಾಯಕರುಗಳ ಸಂವಿಧಾನ ವಿಧಾನದಿಂದ ಪ್ರಾರಂಭಗೊಂಡು ಇಂದಿಗೂ ದೇಶವನ್ನು ಒಡೆದು ಛಿದ್ರಗೊಳಿಸಲು ಅವಣಿಸುತ್ತಿರುವ ಪ್ರತ್ಯೇಕವಾದಿ-ಛಿದ್ರಕಾರಿ ಶಕ್ತಿಗಳೊಂದಿಗೆ ಕಾಂಗ್ರೆಸ್ ಶಾಮೀಲಾಗಿರುವುದನ್ನು ದೀರ್ಘವಾಗಿ ವಿವರಿಸಿದರು. ಅನಕ್ಷರತೆ-ನಿರುದ್ಯೋಗ, ಬಡತನ ಸೃಷ್ಟಿಸಿ ಯುವ ಜನತೆಯನ್ನು ತಪ್ಪುದಾರಿಗೆಳೆದು ಅವರನ್ನು ದುರುಪಯೋಗಗೊಳಿಸುತ್ತಿರುವುದನ್ನು [illegible] ಕುಮಾರ್‌ರವರು ಖಂಡಿಸಿದರು. ರಾಜೇಂದ್ರ, ಮುನಿವೆಂಕಟರೆಡ್ಡಿ ವಿಮಲ್ ಪ್ರಕಾಶ್‌ರವರು ಮಾತನಾಡಿದರು ವಿಚಾರ ಸಂಕಿರಣ ಪ್ರಾರಂಭದಲ್ಲಿ ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಕಾ. ಎಂ. ಎಸ್. ಆನಂದ ಸ್ವಾಗತಿಸಿ ಕೊನೆಯಲ್ಲಿ ಕಾ. ಚಿನ್ನಪ್ಪ ರೆಡ್ಡಿ ವಂದನಾರ್ಪಣೆ ಮಾಡಿದರು.



## ವಿಚಾರ ಸಂಕಿರಣ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ ಎಫ್.ಐ) ದೊಡ್ಡಬಳ್ಳಾಪುರ ಶಾಖೆ ಆಶ್ರಯದಲ್ಲಿ ಆಗಸ್ಟ್ 31ರಂದು ದೊಡ್ಡಬಳ್ಳಾಪುರದ ಮಹಿಳಾ ಸಮಾಜ ಸಭಾಂಗಣದಲ್ಲಿ "ನೂತನ ಶಿಕ್ಷಣ ನೀತಿ" ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಗೌರಿಬಿದನೂರು ನ್ಯಾಷನಲ್ ಕಾಲೇಜು ಇಂಗ್ಲೀಷ್ ಉಪನ್ಯಾಸಕರಾದ ಮಾನ್ಯ ಶ್ರೀ ರಮೇಶ್‌ರವರು ಅಧ್ಯಕ್ಷತೆ ವಹಿಸಿದ್ದರು. ಎಸ್. ಎಫ್. ಐ ನ ಅಧ್ಯಕ್ಷರಾದ ಕಾ. ಆರ್. ಕುಮಾರ್ ಮಾತನಾಡಿದರು.

○

Printed & Published by P. Ramachandra Rao on behalf of the Communist Party of India [Marxist] Karnataka State Committee K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya